# 15

# ಸತ್ಯವನ್ನು ಮಾತನಾಡಿದ ಮನುಷ್ಯ

## (2 ಅರಸು 6:24-7:20)

ಜಗತ್ತಿನಲ್ಲೆಲ್ಲಾ ಅತಿ ಅಮೂಲ್ಯವಾದ ಸರಕು ಎಂದರೆ ಅದು ಸತ್ಯವೇ ಆಗಿದೆ. ಸಲೋಮೋನನು ಬರೆಯುವಂತೆ, "ಸತ್ಯವನ್ನು ... ಕೊಂಡುಕೋ ಅದನ್ನು ಮಾರಿ ಬಿಡಬೇಡ" (ಜ್ಞಾನೋಕ್ತಿ 23:23). ಕೆಲ ಸಂಗತಿಗಳನ್ನು ಯಾವ ಕ್ರಯಕ್ಕೂ ಮಾರಲಾಗದು; ಅಂತವುಗಳಲ್ಲಿ ಸತ್ಯವೂ ಒಂದಾಗಿದೆ. W. J. Deane and S. T. Taylor-Taswell ರವರು ಈ ರೀತಿಯಲ್ಲಿ ವಿಮರ್ಷಿಸಿದ್ದಾರೆ,

> ಸತ್ಯವನ್ನು ಅತ್ಯುನ್ನತ ಮೌಲ್ಯದ ವಸ್ತುವನ್ನಾಗಿ ಪರಿಗಣಿಸಲು, ಅದನ್ನು ಪಡೆದುಕೊಳ್ಳಲು ಎಷ್ಟೇ ನೋವಾಗಲೀ, ಯಾವುದೇ ಕ್ರಯ ಅಥವಾ ತ್ಯಾಗವನ್ನಾಗಲೀ ಮಾಡಲು ಸಿದ್ಧನಿದ್ದನು, ಅದು ಸಿಕ್ಕಾಗ ಸುರಕ್ಷಿತವಾಗಿ ಇಟ್ಟುಕೋ; ಐಹೀಕವಾದ ಲಾಭಕ್ಕಾಗಿ ಅಥವಾ ಇಂದ್ರಿಯಾ ಆನಂದಕ್ಕಾಗಿ ಇದನ್ನು ಮಾರದಿರಿ; ವಿವೇಕವನ್ನು ಬಿಟ್ಟು ಹೋಗದಿರಿ. ಅಥವಾ ಅಪಹಾಸ್ಯ ಮಾಡದಿರಿ; "ಅದನ್ನು ಮಾರಬೇಡಿರಿ" ಯಾವುದೇ ಮುಲಾಜಿನಲ್ಲಿ ಅದನ್ನು ಭಾಗಮಾಡದಿರಿ.[1]

"ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು" (ಯೋಹಾನ 8:32) ಎಂದು ಹೇಳುವಾಗ ಯೇಸುವು ಸತ್ಯದ ಬೆಲೆಯನ್ನು ಒತ್ತಿ ಹೇಳಿದ್ದಾನೆ.

ಎಲ್ಲಾ ಸತ್ಯಗಳೂ ಮೌಲ್ಯವಾದವುಗಳು (ನೋಡಿರಿ ಎಫೆಸ 4:25), ಆದರೆ ಈ ಪಾಠದಲ್ಲಿ ನಾವು ಕೇಂದ್ರೀಕರಿಸುವಂತಹ ಸತ್ಯವು ದೇವರ ವಾಕ್ಯವು ಆಗಿದೆ. ಕೀರ್ತನೆಗಾರನು ಯೆಹೋವನಿಗೆ ಹೀಗೆ ಹೇಳುತ್ತಾನೆ, "ಎಲ್ಲಾ ಆಜ್ಞೆಗಳು ಸತ್ಯವಾಗಿವೆ" (ಕೀರ್ತನೆ 119:151; ನೋಡಿರಿ 2 ಸಮುವೇಲ 7:28; ಕೀರ್ತನೆ 119:160) ಯೋಹಾನ 17ರಲ್ಲಿನ ಯೇಸುವಿನ ಪ್ರಾರ್ಥನೆಯಲ್ಲಿ, "ನಿನ್ನ ವಾಕ್ಯವೇ ಸತ್ಯವು" ಎಂದು ಹೇಳಿದ್ದಾನೆ (ಯೋಹಾನ 17:17; ನೋಡಿರಿ 2 ಕೊರಿಂಥ 6:7; ಗಲಾತ್ಯ 2:5; ಕೊಲಸ್ಸೆ 1:5; 2 ತಿಮೋಥೆ 2:15; ಯಾಕೋಬ 1:18). ನಾವು ದೇವರ ಸತ್ಯವನ್ನು "ಕೊಂಡುಕೊಳ್ಳಲೇಬೇಕು" ಮತ್ತು ಎಂದೆಂದಿಗೂ, ಎಂದೆಂದಿಗೂ, ಎಂದೆಂದಿಗೂ ಅದನ್ನು "ಮಾರ" ಬೇಡ!

ಈ ಪಾಠದ ಶೀರ್ಷಿಕೆಯು "ಸತ್ಯವನ್ನು ಮಾತನಾಡಿದ ಮನುಷ್ಯ" ಎಂದಾಗಿದೆ. 2 ಅರಸು 6 ನೇಯ ಅಧ್ಯಾಯದ ಕೊನೆಯ ಭಾಗ ಮತ್ತು 7ನೇಯದರ ಸಂಪೂರ್ಣ ಅಧ್ಯಾಯದಲ್ಲಿ ನಮ್ಮ ವೇದಭಾಗವಿದೆ. ಪರಿಶುದ್ಧಾತ್ಮನು ಎಲೀಷನ ಬಗೆಗಿನ ಪ್ರತಿಯೊಂದು ಪ್ರಕರಣವನ್ನು ಯಾಕೆ ಪ್ರಕಟಿಸುತ್ತಾನೆ ಎಂಬುದು ನಮಗೆ ನಿಶ್ಚಿತವಿಲ್ಲ, ಆದರೆ ಇದೊಂದರ ಬಗೆಗೆ ನಮ್ಮನ್ನು ಸಂದೇಹದಲ್ಲಿ ಬಿಡಲಾರನು. 7:18-20ನ್ನು ನೋಡಿರಿ. ಮೊದಲ ನೋಟದಲ್ಲಿ, ಈ ವಚನಗಳು ಪುನರಾವರ್ತಿತವಾದಂತೆ ಕಾಣುತ್ತದೆ, ಆದರೆ ಆತ್ಮನು ಈ ಅಂಶವು ಓದುನಿಂದ ತಪ್ಪಿಹೋಗದಂತೆ ಇರುವುದನ್ನು ಖಚಿತಪಡಿಸಿಕೊಳ್ಳಬಯಸುತ್ತಾನೆ. "ದೇವರ ಮನುಷ್ಯನು ... ಹೇಳಿದ ಮಾತು ನೆರವೇರಿತು" (7:18ಎ) ಎಂಬ ಮೂಲ ಮಾತುಗಳಿಂದ ಆ ಸಂಕ್ಷಿಪ್ತವಾದ ಭಾಗವು ಪ್ರಾರಂಭವಾಗುತ್ತದೆ. ಆ ಜನರು ಎಲೀಷನ ಮಾತುಗಳಿಗೆ ಪ್ರಶ್ನಿಸಬಹುದು, ಅವರನ್ನು ಸಂಶಯಿಸಬಹುದು, ಅಥವಾ ಅವರನ್ನು ಹಿಯಾಳಿಸಿರಬಹುದು ಕೂಡಾ; ಆದರೆ ಎಲೀಷನು ದೇವರ ಸತ್ಯವನ್ನೇ ಮಾತನಾಡಿದನು - ಮತ್ತು ದೇವರ ಸತ್ಯವು

ಯಾವಾಗಲೂ ನಿಜವಾದದ್ದಾಗಿದೆ!

ನಮ್ಮ ವೇದಭಾಗವು ಉದ್ದವಾಗಿರುವ ಕಾರಣ, ನಾನು ಇದನ್ನು ಎರಡು ಪಾಠಗಳಲ್ಲಿ ವಿಂಗಡಿಸಿದ್ದೇನೆ. ಈ ಮಂಡನೆಯ ದೃಷ್ಟಿಕೋನವನ್ನು, ಸತ್ಯದ ಬಗೆಗಿನ ವಾಸ್ತವದ ಕುರಿತಾದ ಮಹತ್ವವಾದ ಮುಖ್ಯಾಂಶಗಳನ್ನೂ ಇದು ಕೊಡುವುದಾಗಿದೆ.

## ಸತ್ಯವನ್ನು ಅಲಕ್ಷಿಸುವುದರಿಂದ ಸತ್ಯವನ್ನು ಬದಲಾಯಿಸಲಾಗದು (6:24-29)

**ದುರಂತ: ನೈಜತೆ**

ನಮ್ಮ ಕಥೆಯು "ಆ ಮೇಲೆ ಅರಾಮ್ಯರ ಅರಸನಾದ ಬೆನ್ಹದದನು ತನ್ನ ಎಲ್ಲಾ ಸೈನ್ಯವನ್ನು ಕೂಡಿಸಿಕೊಂಡು ಬಂದು ಸಮಾರ್ಯಕ್ಕೆ ಮುತ್ತಿಗೆ ಹಾಕಿದನು" (ವಚನ 24) ಎಂದು ಪ್ರಾರಂಭವಾಗುತ್ತದೆ. "ಆ ಮೇಲೆ" ಇದು ಹಿಂದಿನ ವಚನ 23ರಲ್ಲಿ: "ಅಂದಿನಿಂದ ಸುಲಿಗೆ ಮಾಡುವ ಅರಾಮ್ಯರ ಗುಂಪುಗಳು ಇಸ್ರಾಯೇಲ್ಯರ ಪ್ರಾಂತ್ಯದೊಳಗೆ ತಿರುಗಿ ಬರಲಿಲ್ಲ" ಎಂದು ಇದ್ದುದನ್ನು ಇದು ಸೂಚಿಸುವುದಾಗಿದೆ. ಶಾಂತಿಯ ಆ ಅವಧಿಯು ಮುಗಿದ ನಂತರ (ಅದು ಎಷ್ಟರವರೆಗೆ ಇತ್ತು ಎಂಬುದು ನಾವು ಅರಿಯೆವು), ಬೆನ್ಹದದನು ಇಸ್ರಾಯೇಲ್ಯನ ವಿರುದ್ಧ ದೊಡ್ಡ ಸಂಚನ್ನು ಮಾಡಿದನು. ಆತನ ಸೇನೆಯು ಸಮಾರ್ಯ ಪಟ್ಟಣದೆಡೆಗೆ, ಇಸ್ರಾಯೇಲ್ಯನ ಅರಸನ ಅರಮನೆಯು ಇರುವ ಹತ್ತಿರ ಸೇರಿಬಂತು. ಆ ಸಮಯದಲ್ಲಿ ಅಲ್ಲಿ ಅರಸನಾಗಿದ್ದವನು ಬಹುಶಃ ಜೋರಾಮ (ಯೋರಾಮನು) ಆಗಿದ್ದನು. ಜೋಸ್ಫಸ್‌ನ ಪ್ರಕಾರ, ಯೋರಾಮನು ಬೆನ್ಹದದನ ಸೈನ್ಯವನ್ನು ತೆರದ ಮೈದಾನದಲ್ಲಿ ಎದುರಿಸಲು ಭಯಪಡುವುದಕ್ಕೆ ಕಾರಣ ಆತನ ಸೈನ್ಯವು ಅರಾಮ್ಯರ ಅರಸನ ಸೇನೆಗೆ ಸರಿಸಮಾನತೆ ಇಲ್ಲದಿದ್ದುದೇ ಆಗಿತ್ತು. ಯುದ್ಧದ ಯಾವುದೇ ಗಂಡಾಂತರವನ್ನು ಎದುರಿಸದ ಕಾರಣ ಆತನು ತಾನೇ ತನ್ನ ರಾಜ್ಯದೊಳಗಿನ ಬಾಗಿಲನ್ನು ಮುಚ್ಚಿದನು.[2]

ಅರಾಮ್ಯರು ಪಟ್ಟಣವನ್ನು ಸುತ್ತುವರೆದಂತೆ, "ಸಮಾರ್ಯ ಪಟ್ಟಣದಲ್ಲಿ ಘೋರವಾದ ಬರವಿದ್ದಿತು" (ವಚನ 25ಎ). ಈ ಬರವು 4:38 ಮತ್ತು 8:1 ರಲ್ಲಿ ಸೂಚಿಸಲಾದ ಅಥವಾ ಉಪದ್ರವದ ಆರಂಭದಲ್ಲಿ, ಆ ಪಟ್ಟಣದ ನಿವಾಸಿಗಳು ಆಹಾರಕ್ಕಾಗಿ ಪರದಾಡುವ ಅರ್ಥದಲ್ಲಿ ಸೂಚಿಸುವುದಾಗಿದೆ. ಹೇಗೆ ಆದರೂ ಬೆನ್ಹದದನ ರಣ ನೀತಿಯು ಏನೆಂದರೆ, ಪಟ್ಟಣವು ಹಸಿವೆಯ ನಿಮಿತ್ತ ಶರಣಾಗತರಾಗುವಂತೆ ಮಾಡುವುದೇ ಆಗಿತ್ತು.

ಅವರ ಆಕ್ರಮಣವು ದಿನದಿಂದ ದಿನಕ್ಕೆ, ವಾರದಿಂದ ವಾರಕ್ಕೆ ಪಟ್ಟಣಿಗರು ರೋಸಿ ಹೋಗುವವರೆಗೂ ಮುಂದುವರೆಯುತ್ತಾ ಹೋಯಿತು. "ಕತ್ತೆಯ ತಲೆಯು ಎಂಭತ್ತು ಬೆಳ್ಳಿಯ ಶೆಕಲಗಳಿಗೂ (ಸುಮಾರು ಎರಡು ಪೌಂಡ ಬೆಳ್ಳಿ) ಆರೆಸೇರು ಪಾರಿವಾಳದ ಮಲವು ಐದು ಬೆಳ್ಳಿಯ ಶೆಕಲಗಳಿಗೂ [ಸುಮಾರು ಎರಡು ಔನ್ಸ್] ಮಾರಲ್ಪಟ್ಟವು"[3] (6:25ಬಿ). ಧರ್ಮಶಾಸ್ತ್ರದ ಪ್ರಕಾರ, ಕತ್ತೆಯು ಅಶುದ್ಧ ಪ್ರಾಣಿಯಾಗಿದ್ದು ಇಸ್ರಾಯೇಲ್ಯರಿಂದ ತಿನ್ನಲ್ಪಡುತ್ತಿರಲಿಲ್ಲ (ನೋಡಿರಿ ಯಜಕಕಾಂಡ 11:2-8; ಧರ್ಮೋಪದೇಶಕಾಂಡ 14:4-8). ಕತ್ತೆಯ ತಲೆಯು ಅಲ್ಪವಾದ ಮಾಂಸವನ್ನು ಹೊಂದಿದ್ದು ಕಳೇ ಬರದಲ್ಲಿ ಅಯೋಗ್ಯವಾದ ಭಾಗವಾಗಿರಬಹುದಿತ್ತು. ಅಷ್ಟೇ ಅಲ್ಲ ಇದು ವಿಪರೀತವಾದ ಬೆಲೆಗೆ ತರಲ್ಪಟ್ಟಿತು.

"ಕ್ಯಾಬದ ನಾಲ್ಕನೆಯ ಭಾಗ" ಇದು ಸುಮಾರು ಔನ್ಸಿನ ಅಳತೆ ಆಗಿರಬಹುದು.[4] ಪ್ರಾಣಿಗಳ ಲದ್ದಿಯು ಭಯಂಕರವಾದ ಬರದ ಸಮಯದಲ್ಲಿ ತಿನ್ನುವುದಕ್ಕಾಗಿ ಕೂಡಿಸುತ್ತಿದ್ದರಿಂದ "ಪಾರಿವಾಳದ ಮಲದ" ವಿವರಣೆಯು ಬಹುಶಃ ಅಕ್ಷರಸಹ ತೆಗೆದುಕೊಳ್ಳಲ್ಪಟ್ಟಿದ್ದಾಗಿರಬಹುದು ... ;[5] ಆದರೆ ಇದು ವಿಶೇಷವಾಚಕವಾಗಿ ತಿರಸ್ಕರಣೀಯ ತರದ ಆಹಾರವನ್ನು ಸೂಚಿಸುವುದಕ್ಕೆ ಬಳಸಲ್ಪಡುವಂತದ್ದು ಆಗಿದೆ.[6] NIVಯಲ್ಲಿ "ಬೀಜದ ತೊಗಟೆ" ಎಂದಿದ್ದು. JB ಯಲ್ಲಿ, "ಕಾಡು ಈರುಳ್ಳಿ" ಎಂದಿದೆ. ಅಲ್ಲಿನ ಪರಿಸ್ಥಿತಿಯು ಬಲು ಕೆಟ್ಟದ್ದಾಗಿತು - ಇಷ್ಟು ಕೆಟ್ಟದ್ದಾಗಿತ್ತೆಂದರೆ

ಸಾಮಾನ್ಯವಾಗಿ ಮಾನವನ ಸೇವನೆಗೆ ಅಯೋಗ್ಯವೆಂದು ಪರಿಗಣಿಸಲ್ಪಡುವಂತವುಗಳೂ ಕೂಡಾ ಕೇವಲ ಶ್ರೀಮಂತರು ಮಾತ್ರ ಕೊಳ್ಳುವಂತಹ ಕ್ರಯಕ್ಕೆ ಮಾರಲ್ಪಡುತ್ತಿದ್ದವು.

ಇದಕ್ಕಿಂತ ಕೆಟ್ಟದ್ದು ಇನ್ನೂ ಬರಬೇಕಿದೆ. ಒಂದು ದಿನ ಯೋರಾಮನು ಪೌಳಿ ಗೋಡೆಯ ಮೇಲೆ ನಡೆದಾಡುತ್ತಿದ್ದನು (2 ಅರಸು 6:26ಎ) - ಬಹುಶಃ ಆತನು ಕೋಟೆಯನ್ನು ಪರಿಕ್ಷಿಸುತ್ತಿದ್ದಿರಬಹುದು ಮತ್ತು ವೈರಿಗಳ ಕಾರ್ಯವನ್ನು ನೋಡುತ್ತಿರಬಹುದು. ಆತನು ಹಾಗೆ ಮಾಡುತ್ತಿದ್ದಾಗ ಒಬ್ಬ ಹೆಂಗಸು "ಅರಸೇ ನನ್ನ ಒಡೆಯನೇ, ನನ್ನನ್ನು ರಕ್ಷಿಸು!" ಎಂದು ಜೋರಾಗಿ ಅತ್ತಳು (ವಚನ 26ಬಿ). ಅವಳಿಗೆ ಆಹಾರ ಬೇಕಾಗಿದೆ ಎಂದು ಅರಸನು ಕಲ್ಪಿಸಿಕೊಂಡನು. ಆತನು ಅವಳಿಗೆ "ಯೆಹೋವನು ನಿನ್ನನ್ನು ರಕ್ಷಿಸದಿದ್ದರೆ ನಾನು ಹೇಗೆ ರಕ್ಷಿಸಬಹುದು? ಕಣದಲ್ಲಾಗಲಿ ದ್ರಾಕ್ಷೇ ಅಲೆಯಲ್ಲಾಗಲಿ ಏನಾದರೂ ಉಂಟೋ?" (ವಚನ 27) ಎಂದು ಕೇಳಿದನು. NCV ಭಾಷಾಂತರವು ಸೂಚಿಸುವುದೇನೆಂದರೆ, "ಒಂದು ವೇಳೆ ಯೆಹೋವನು ನಿನಗೆ ಸಹಾಯ ಮಾಡದಿದ್ದರೆ ನಾನು ಹೇಗೆ ಮಾಡಲಿ? ಕಣದಿಂದ [ಕಾಳುಗಳೇ ಇಲ್ಲದ] ಅಥವಾ ದ್ರಾಕ್ಷೇ ಅಲೆಯಿಂದ [ದ್ರಾಕ್ಷಾರಸವೇ ಇಲ್ಲದ] ನಿನಗೆ ಸಹಾಯವನ್ನು ತರಲೋ?" ಎಂದು.

ನಂತರ ಅರಸನು ಅಂತಿಮವಾಗಿ ಆ ಸ್ತ್ರೀಯನ್ನು ಕೇಳಿದನು, "ನಿನಗಿರುವ ದುಃಖವು ಯಾವುದು?" (ವಚನ 28; NIVಯಲ್ಲಿ ಸರಳವಾಗಿ "ಏನು ವಿಷಯ?" ಎಂದಿದೆ.) ಆ ಸ್ತ್ರೀಯು ಕೇವಲ ಆಹಾರವನ್ನು ಕೇಳಲು ಬಂದಿರಲಿಲ್ಲ ಆದರೆ ಅವಳು ನ್ಯಾಯದ ಅವಗಾಹನೆಗೆ ಬಂದಿದ್ದಳು ಎಂಬುದಕ್ಕೆ ಅದು ತಿರುಗಿಕೊಳ್ಳುತ್ತದೆ. ಅವಳ ಕಥೆಯನ್ನು ಹಾಲಿಸಲು ನಾನು ಸೂಚಿಸುತ್ತೇನೆ (ಮಕ್ಕಳನ್ನು ಹಿಯಾಳಿಸುವ ಬಗೆಗಿನ ಕಥೆಯು ನನ್ನನ್ನು ದೈಹಿಕವಾಗಿ ಅನಾರೋಗ್ಯಕ್ಕೆ ಎಡೆ ಮಾಡಿಕೊಡುತ್ತದೆ), ಆದರೆ ಹತಾಷೆಯು ಆ ಪಟ್ಟಣವನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದುಕೊಂಡಿತ್ತು ಎಂದು ಇದು ದೃಷ್ಟಾಂತಿಕರಿಸುತ್ತದೆ.

> ಆಗ ಆಕೆಯು - ಈ ಸ್ತ್ರೀಯು ನನಗೆ - "ನಿನ್ನ ಮಗನನ್ನು ತೆಗೆದುಕೊಂಡು ಬಾ; ನಾವು ಈ ಹೊತ್ತು ಅವನನ್ನು ತಿಂದುಬಿಡೋಣ; ನಾಳೆ ನನ್ನ ಮಗನನ್ನು ತಿನ್ನೋಣ ಎಂದು ಹೇಳಿದ್ದರಿಂದ ನಾವಿಬ್ಬರೂ ನನ್ನ ಮಗನನ್ನು ಬೇಯಿಸಿ ತಿಂದುಬಿಟ್ಟೆವು. ಮರುದಿವಸ ನಾನು ಈಕೆಗೆ - ಈ ಹೊತ್ತು ನಿನ್ನ ಮಗನನ್ನು ಕೊಂದು ತೆಗೆದುಕೊಂಡು ಬಾ; ಅವನನ್ನು ಕೊಂದು ತಿನ್ನೋಣ ಅಂದಾಗ ಈಕೆಯು ಅವನನ್ನು ಎಲ್ಲಿಯೋ ಅಡಗಿಸಿಟ್ಟಳು" ಎಂದು ಹೇಳಿದಳು (ವಚನಗಳು 28ಬಿ, 29).[7]

ಇದು ದೇವರ ಮಕ್ಕಳಲ್ಲಿನ ನರಭಕ್ಷಣೆಯ ಮೊದಲ ವಿವರವಾಗಿದೆ. ಈ ತರದ ಕ್ರೂರ ಕೃತ್ಯವು ಯೆರೂಸಲೇಮಿನಲ್ಲಿ ಕ್ರಿ.ಪೂ. 587ರಲ್ಲಿ ನೆಬೂಕದ್ನೆಚ್ಚರನ ಆಕ್ರಮಣದ ಆರಂಭದಲ್ಲಿ ಕಾಣಿಸಿಕೊಂಡಿತ್ತು (ನೋಡಿರಿ ಪ್ರಲಾಪ 2:20; 4:10; ಯೆಹಜ್ಕೇಲ 5:10). ಜೋಸ್ಫಸನು ಸಹ ಕ್ರಿ.ಶ. 70ರ ಟೈಟಸನ ಕೊನೆಯ ಆಕ್ರಮಣದಿಂದ ಈ ತರದ ಅವಮಾನವೀಯ ನಡತೆಯು ಬಂದಿತ್ತು ಎಂದು ಬರೆಯುತ್ತಾನೆ.[8]

**ದುರಂತ: ಕಾರಣ**

ಇಂಥ ಭಯಂಕರವಾದ ಸ್ಥಿತಿಯು ಯಾವ ಕಾರಣಕ್ಕಾಗಿ ತರಲ್ಪಟ್ಟಿತು? ಆ ಅಕ್ರಮಣವು, ಬರಗಾಲ ಮತ್ತು ಭಯಂಕರವಾದ ಪರಿಣಾಮಗಳು, *ವಿಗ್ರಹಾರಾಧನೆಯೂ* ಸೇರಿ ಪಾಪದ ಪರಿಣಾಮಗಳಾಗಿದ್ದವು. ಜನರು ದೇವರೊಂದಿಗಿನ ತಮ್ಮ ಒಡಂಬಡಿಕೆಯನ್ನು ಕಾಪಾಡಿಕೊಳ್ಳುವಲ್ಲಿ ವಿಫಲರಾಗಿದ್ದರು. ಒಂದು ವೇಳೆ ಇಸ್ರಾಯೇಲ್ಯರು, ದೇವರ ಒಡಂಬಡಿಕೆಯನ್ನು ಕಾಪಾಡಿಕೊಳ್ಳದೇ ಹೋದರೆ ವೈರಿಗಳು ಅವರ ಎಲ್ಲಾ ಪಟ್ಟಣಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲ್ಪಡುತ್ತವೆ ಎಂದು ಮೋಶೆಯು ಅವರನ್ನು ಎಚ್ಚರಿಸಿದ್ದನು (ಧರ್ಮೋಪ

ದೇಶಕಾಂಡ 28:52). "ಶತ್ರುಗಳು ಮುತ್ತಿಗೆ ಹಾಕಿ ನಿಮ್ಮನ್ನು ಇಬ್ಬಿಕಿಸುವುದರಿಂದ ನೀವು ನಿಮ್ಮಸಂತಾನವನ್ನೇ ಅಂದರೆ ನಿಮ್ಮ ದೇವರಾದ ಯೆಹೋವನು ನಿಮಗೆ ಕೊಟ್ಟಿರುವ ಗಂಡು ಹೆಣ್ಣೂ ಮಕ್ಕಳ ಮಾಂಸವನ್ನೇ ತಿನ್ನುವಿರಿ" (ವಚನ 53). ತಿರುಗಿ ಮೋಶೆಯು ದೇವರ ಸಂದೇಶವನ್ನು ಜನರಿಗೆ ಕೊಡುತ್ತಾನೆ.

> "... ನನ್ನ ಮಾತನ್ನು ಕೇಳದೆ ನನಗೆ ವಿರೋಧವಾಗಿ ನಡೆದರೆ ನಾನು ನಿಮಗೆ ವಿರೋಧ ವಾಗಿ ಕೋಪದಿಂದ ನಡೆಯುವವನಾಗಿ ನಿಮ್ಮ ಪಾಪಗಳ ನಿಮಿತ್ತ ಏಳರಷ್ಟಾಗಿ ಶಿಕ್ಷಿಸು ವೆನು. ನೀವು ನಿಮ್ಮ ಗಂಡು ಹೆಣ್ಣು ಮಕ್ಕಳ ಮಾಂಸವನ್ನು ತಿನ್ನುವಿರಿ" (ಯಾಜಕಕಾಂಡ 26:27-29).

ಸಮಾರ್ಯದ ಜನರು ದೇವರ ಮಾತುಗಳನ್ನು ಅಲಕ್ಷಿಸಿದರು, ಆದರೆ ಅದು ಸತ್ಯವನ್ನು ಬದಲಾಯಿಸಲಿಲ್ಲ. ಅವರು ಇನ್ನೂ ಇಂಥ ಪರಿಣಾಮಗಳಿಗೋಸ್ಕರ ಕಷ್ಟಪಡಬೇಕಾಗಿದೆ. ಪ್ರವಾದಿಯು ಹೇಳುವುದೇನೆಂದರೆ "ಅವರು ಗಾಳಿಯನ್ನು ಬಿಡುತ್ತಾರೆ, ಬಿರುಗಾಳಿಯನ್ನು ಕೊಯ್ಯುತ್ತಾರೆ" (ಹೋಶೇಯ 8:7ಎ). ಪೌಲನು "ಮನುಷ್ಯನು ತಾನು ಏನನ್ನು ಬಿತ್ತುತ್ತಾನೋ ಅದನ್ನು ಬೆಳೆಯಬೇಕು" (ಗಲಾತ್ಯ 6:7ಬಿ) ಎಂದು ಬರೆಯುತ್ತಾನೆ.

ಇಂದು ಜಗತ್ತು ದೇವರ ಸತ್ಯವನ್ನು ಅಲಕ್ಷಿಸುವ ಜನರಿಂದ ತುಂಬಿಕೊಂಡಿದೆ. ಕೆಲವರು ಹಾಗೆ ಮಾಡುತ್ತಾರೆ ಯಾಕೆಂದರೆ ಅವರು ಈ ದಿಶೆಯಲ್ಲಿ ಕಲಿಸಲ್ಪಟ್ಟವರಾಗಿರುವುದಿಲ್ಲ; ಇನ್ನೂ ಇತರರು ಹಾಗೆ ಮಾಡುವುದಕ್ಕೆ ಕಾರಣ ಅವರು ಸ್ವಯಿಚ್ಛೆಯಿಂದ ಅಜ್ಞಾನದಲ್ಲಿ ತಿರುಗಿ ಉಳಿಯುವವರಾಗಿರುತ್ತಾರೆ. ಸೈತಾನನ ಅನೇಕ ಸುಳ್ಳುಗಳಲ್ಲಿ ಒಂದು ಎಂದರೆ, ಬೈಬಲ್ ಮಹತ್ವದ್ದಲ್ಲ ಮತ್ತು ಅದರ ವಿಧಿವಿಧಾನಗಳಿಗೆ ವಿಧೇಯರಾಗುವದು ಅಷ್ಟೇನು ಮಹತ್ವವಲ್ಲ ಎಂಬುದಾಗಿದೆ. ಸಮಾರ್ಯದಲ್ಲಿನ ಮಾತನಾಡಲಾಗದಂತ ಪರಿಸ್ಥಿತಿಯತ್ತ ಗಮನಹರಿಸಿರಿ. ಸತ್ಯವನ್ನು ಅಲಕ್ಷಿಸುವುದರಿಂದಾಗುವ ಸಂದಿಗ್ಧತೆಯ - ಭಯಂಕರವಾದ ಪರಿಣಾಮಗಳ ಬಗೆಗೆ ಕಲಿಯಿರಿ. ಪೌಲನು ಅಂಥವರಿಗೆ "ಅವರ ಮನಸ್ಸು ಮೊಬ್ಬಾಗಿ ಹೋಗಿದೆ, ಅವರು ತಮ್ಮ ಹೃದಯದ ಕಠಿಣ್ಯತೆಯ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ" ಎಂದು ಹೇಳುತ್ತಾನೆ (ಎಫೆಸ 4:18). ಸತ್ಯವೇದದ ಸರಳ ಬೋಧನೆಯನ್ನು *ನೀವು* ಅಲಕ್ಷಿಸುತ್ತಾ ಹೋದದ್ದಾದರೆ, ಸತ್ಯವನ್ನು ಅಲಕ್ಷಿಸುವುದು ಸತ್ಯವನ್ನು ಬದಲಾಯಿಸಲಾರದು ಎಂಬ ಸತ್ಯವನ್ನು ನೀನು ಕಲಿಯುವಂತೆ ಪಾಪವು ನಿನ್ನ ಜೀವಿತವನ್ನು ನಿರ್ನಾಮ ಮಾಡದಂತೆ ನಾನು ಪ್ರಾರ್ಥಿಸುವವನಾಗಿದ್ದೇನೆ!

## ಸತ್ಯದ ಮೇಲೆ ಕೋಪಗೊಳ್ಳುವುದರಿಂದ ಸತ್ಯವನ್ನು ಬದಲಾಯಿಸಲಾರಿರಿ (6:30-33)

**ಅರಸನ ನಿರಾಶೆ**

"ಆ ಸ್ತ್ರೀಯ ಮಾತುಗಳನ್ನು ಕೇಳಿದ ಕೂಡಲೇ, ಆತನು ನಿರಾಶೆಗೊಳಗಾದನು ಮತ್ತು ತನ್ನ ಬಟ್ಟೆಗಳನ್ನು ಹರಿದುಕೊಂಡನು" (ವಚನ 30ಎ; 5:7ರೊಡನೆ ಹೋಲಿಸಿರಿ). ಆತನು ಗೋಡೆಯ ಮೇಲೆ ಇರುವುದರಿಂದ, ಆತನ ಕೃತ್ಯಗಳು ಕೆಳಗಿರುವರಿಗೆ ಕಾಣುವಂತಿದ್ದವು (ವಚನ 30ಬಿ). "ಆಗ ಅವನ ಮೈಮೇಲೆ ಗೋಣೀತಟ್ಟು ಇರುವದು ಜನರಿಗೆ ಕಂಡಿತು" (ವಚನ 30ಸಿ).

ಗೋಣೀತಟ್ಟು ಕಡಿಮೆ ಬೆಲೆಯ ಬಟ್ಟೆಯಾಗಿದ್ದು ಒರಟಾದ ನಾರಿನಿಂದ ಹೆಣೆಯಲ್ಪಟ್ಟಂತಹದ್ದಾಗಿದ್ದು ಇದು (ಇಲ್ಲಿನ ಹೆಸರು ಸೂಚಿಸುವಂತೆ) ತಟ್ಟನ್ನು (ದೊಡ್ಡ ತಟ್ಟನ್ನು)

ಮಾಡಲು ಬಳಸಲ್ಪಡುತ್ತಿತ್ತು. ನಾನು ಬಾಲಕನಾಗಿದ್ದಾಗ, ನಾವು ಆತರದ ಬಟ್ಟೆಯನ್ನು "ಸುತ್ತುವುದಕ್ಕೆ ಬೇಕಾಗುವ ಗೋಣೀತಟ್ಟು" ಎಂದು ಕರೆಯುತ್ತಿದ್ದೆವು. ತಟ್ಟಿನಿಂದ ಮಾಡಿದ ಗೋಣೀತಟ್ಟನ್ನು ನಾವು "ತಟ್ಟು" ಅಥವಾ "ಗನ್ನೀ ತಟ್ಟು" ಎಂದು ಕರೆಯುತ್ತಿದ್ದೆವು.[9] ಗೋಣೀ ತಟ್ಟು ಇದು ಸಾಮಾನ್ಯವಾಗಿ ಬಟ್ಟೆಗಳನ್ನು ಮಾಡಲು ಬಳಸುವಂತಹದ್ದಾಗಿರಲಿಲ್ಲ ಯಾಕೆಂದರೆ ಇದು ಒರಟಾದ ಮೇಲ್ಮೈಯನ್ನು ಹೊಂದಿದ್ದು ಚರ್ಮಕ್ಕೆ ಕಿರಿಕಿರಿ ಉಂಟುಮಾಡುವಂತಹದ್ದಾಗಿತ್ತು. ಬೈಬಲ್ಲಿನ ಸಮಯದಲ್ಲಿ, ಜನರು ಕೆಲಸಾರೆ ನಮ್ರತೆಯನ್ನು ದುಃಖವನ್ನು ಮತ್ತು / ಅಥವಾ ತಾಳ್ಮೆಯನ್ನು ಸೂಚಿಸುವ ಸಲುವಾಗಿ ತಮ್ಮ ಮೈಮೇಲೆ ಬೇರೆಬಟ್ಟೆಗಿಂತ ಮೊದಲು ಹಾಕಲ್ಪಡುವ ಪರಿಪಾಠವನ್ನು ಹೊಂದಿತ್ತು (ನೋಡಿರಿ ಆದಿಕಾಂಡ 37:34; 2 ಸಮುವೇಲ 3:31; 2 ಅರಸು 19:1).

ಅರಸನು ಯಾಕೆ ಈ ರೀತಿಯ ಬಟ್ಟೆಗಳನ್ನು ಧರಿಸಿದ್ದನು? ಇದರ ಉತ್ತರಕ್ಕಾಗಿ, ನಮ್ಮ ಕಥೆಗೆ ಹಿಂದಿರುಗುವದು ನಮಗೆ ಅವಶ್ಯವಿದೆ. "ಆ ವಿವರಣೆಯು ... ಅದುಮಲ್ಪಟ್ಟಿದ್ದು ಮತ್ತು ಅರಿತುಕೊಳ್ಳಲು ಕಷ್ಟದಾಯಕವೂ"[10] ಆಗಿರುವುದರಿಂದ, ಅದರಲ್ಲಿನ ಬಿರುಕುಗಳನ್ನು ನಾವು ತುಂಬಬೇಕಾಗಿದೆ. ಎಲೀಷನು ಈ ಹಿಂದೆಯೇ ಅರಸನಿಗೆ ದೈವ ಪ್ರೇರಣೆಯಿಂದ ಒಂದು ಸಂದೇಶವನ್ನು ಬಿಡುಗಡೆ ಮಾಡಿದದ್ದನ್ನು ನಾವು ಊಹಿಸಬಹುದಾಗಿದೆ. ಅಂಥ ಸಂದೇಶಗಳು ಖಚಿತಗಳು ಖಚಿತವಾಗಿ ಈ ರೀತಿಯ ಸತ್ಯಗಳನ್ನು ಒಳಗೊಂಡಿರುತ್ತವೆ:

- "ಕರ್ತನಿಂದಾದ ನಿನ್ನ ತೊಂದರೆಗಳು, ನಿನ್ನ ಪಾಪಕ್ಕಾಗಿನ ಶಿಕ್ಷೆಗಳು ಆಗಿವೆ."
- "ಜನರು ತಮ್ಮ ಕೆಟ್ಟತನಕ್ಕಾಗಿ ಪಶ್ಚಾತ್ತಾಪಪಟ್ಟರೆ (ಅವರ ಅರಸನಾದ ನಿನ್ನಿಂದ ಪ್ರಾರಂಭಿಸಿ), ದೇವರು ನಿಮ್ಮನ್ನು ಬಿಡಿಸುವನು."

ಎಲೀಷನು ಅರಾಮ್ಯರಿಗೆ ಶರಣಾಗುವುದರ ಬದಲಾಗಿ "ಸ್ವಲ್ಪ ತಡೆಯಿರಿ, ಮತ್ತು ಕರ್ತನು ನಿಮ್ಮನ್ನು ಬಿಡಿಸುತ್ತಾನೆ" ಎಂಬ ಸಲಹೆಯನ್ನು ಕೊಟ್ಟಿರಬಹುದು.

ತನ್ನ ದೇಹದ ಮೇಲೆ ಯಾಕೆ ಗೋಣೀತಟ್ಟನ್ನು ಹಾಕಿಕೊಂಡಿದ್ದನು, ಅದು ತಾಳ್ಮೆಯ ಸಂಕೇತವಾದ ಸಂದೇಶಗಳೊಡನೆ ಈ ಸಾಲುಗಳು ವಿವರಿಸಬಹುದಾಗಿದೆ. ಇದರೊಡನೆ ಇರುವ ದೋಷವಾದರೂ ಏನು? ಆನಂತರದ ಘಟನೆಯು ಸೂಚಿಸುವುದೇನೆಂದರೆ ಆತನು ಪಶ್ಚಾತ್ತಾಪಪಟ್ಟಿರಲಿಲ್ಲ: ಅದನ್ನು ಆತನು ತನ್ನ ಪಾಪಗಳಿಗಾಗಿ ಹೃದಯಪೂರ್ವಕವಾದ ದುಃಖವಿಲ್ಲದ ಹೊರಗಿನ ತೋರಿಕೆಗಾಗಿ ತೋರಿಸುವ ಪಶ್ಚಾತ್ತಾಪ ಕೇವಲ ಬರಿದಾದದ್ದೂ ಮತ್ತು ಅರ್ಥಹೀನವೂ ಆಗಿರುತ್ತದೆ. (ನಂತರದಲ್ಲಿ ಬರುವ ಒಂದು ಉದಾಹರಣೆ ಎಂದರೆ ಮಗುವಿನ "ತಪ್ಪಾಯಿತು" ಎಂಬ ಗೊಣಗಾಟವೇ. ಯಾಕೆಂದರೆ ಆತನ ತಾಯಿಯು ಆತನಿಗೆ ತಪ್ಪಾಯಿತು ಎಂದು ಹೇಳಲು ಮನಸ್ಸಿಲ್ಲದಿದ್ದಾಗಲೂ ಹಾಗೆ ಹೇಳಲು ಪ್ರೇರೇಪಿಸುವಂತಹದು.)

ಆ ಸ್ತ್ರೀಯ ಹೃದಯವಿದ್ರಾವಕ ಕಥೆಯು ಅರಸನನ್ನು ದಿಗಿಲುಗೊಳಿಸಿತು. ಆತನು ಈ ರೀತಿ ಯೋಚಿಸಿರಬಹುದೆಂದು ನಾನು ಊಹಿಸುತ್ತೇನೆ "ನನಗರ್ಥವಾಗುತ್ತಿಲ್ಲ! ಕರ್ತನು ನಮ್ಮನ್ನು ಬಿಡಿಸದೆ ಹೋಗುವತನಕ ಈ ರೀತಿಯ ತುರಿಕೆ ಮತ್ತು ಗೆರೆಬಿಳಿಸುವ ಸಂಗತಿಗಳಿಂದ ನನ್ನಷ್ಟಕ್ಕೆ ನಾನೇ ನನ್ನ ರಾಜ್ಯದಿಂದ ಬಚ್ಚಿಟ್ಟುಕೊಳ್ಳಬೇಕಾಗಿದೆ. ಹಾಗಿದ್ದಾಗಲೂ ಯೆಹೋವನು ನನ್ನನ್ನು ರಕ್ಷಿಸದೆ ಹೋದನು. ನಿಜವಾಗಿ, ಈ ಸ್ಥಿತಿಯು ನಿಮಿಷ ನಿಮಿಷಕ್ಕೂ ಕೆಟ್ಟದ್ದಾಗಿ ಹೋಗುತ್ತಲೇ ಇದೆ!"

**ಅರಸನ ನಿರ್ಧಾರ**

ಅರಸನು ಏನು ಮಾಡಿದನು? "ದಾನ್ ಮತ್ತು ಬೇತೇಲಿನಿಂದ ಎಲ್ಲಾ ವಿಗ್ರಹಗಳನ್ನು ಹೊರಗೆ ಹಾಕೋಣ [ನೋಡಿರಿ 1 ಅರಸು 12:28, 29], ಬಾಳತ್ವವನ್ನು ಒಂದೆಡೆಯಿಂದ

ಅಲ್ಲ ಎಲ್ಲಡೆಯಿಂದಲೂ ಅಳಿಸಿಹಾಕಿರಿ, ಮತ್ತು ಯೆಹೋವನೊಬ್ಬನನ್ನೇ ದೇವರೆಂದು ಆರಾಧಿಸಿರಿ ಎಂದು ಆತನು ನಿರ್ಧರಿಸಿರಬಹುದೇ''? ಒಂದು ವೇಳೆ ಆತನು ತನ್ನ ಜನರನ್ನು ಪಶ್ಚಾತ್ತಾಪಪಡಲು ಮತ್ತು ಪ್ರಾರ್ಥಿಸಲು ಕರೆದದ್ದಾದರೆ ಯೆಹೋವನು ಆತನನ್ನು ಆಶೀರ್ವದಿಸುತ್ತಿದ್ದನು (2 ಪೂರ್ವಕಾಲವೃತ್ತಾಂತ 7:14). ಆ ರೀತಿಯಲ್ಲಿ ಪ್ರತಿಕ್ರಿಯಿಸುವ ಬದಲಾಗಿ, ಹೇಗೋ, ಯೋರಾಮನು ಪ್ರವಾದಿಯ ಮೇಲೆ ಕೋಪಗೊಂಡು: ''ಶಾಫಾಟನ ಮಗನಾದ ಎಲೀಷನ ತಲೆಯನ್ನು ಹಾರಿಸದಿದ್ದರೆ ದೇವರು ನನಗೆ ಏನು ಬೇಕಾದದ್ದನ್ನು ಮಾಡಲಿ [ಆತನ ತಾಯಿಯ ಮಾತುಗಳೊಂದಿಗೆ ಹೋಲಿಸಿರಿ 1 ಅರಸು 19:2]'' (2 ಅರಸು 6:31) ಎಂದು ಹೇಳಿದನು. ಈತ್ತೀಚೆಗೆ ಅರಸನು ಎಲೀಷನನ್ನು ''ಅಪ್ಪಾ'' (ವಚನ 21) ಎಂದು ಕರೆದಿದ್ದನು ಮತ್ತು ಆತನ ಸಲಹೆಯನ್ನು ಕೇಳಿದ್ದನು (ವಚನಗಳು 22, 23), ಆದರೆ ಈಗ ಆತನು ಆತನ ಮರಣವನ್ನು ಬಯಸುತ್ತಿದ್ದಾನೆ. ಪ್ರವಾದಿಯ ತಲೆಯು ''ಇಸ್ರಾಯೇಲಿನಲ್ಲಿ ಅತೀ ಮುಗ್ಧವಾದ ಮತ್ತು ಮೌಲ್ಯಯುತವಾದದ್ದು [ತಲೆ] ಆಗಿತ್ತು''[11] ಆದರೆ ಅರಸನು ಅದನ್ನು ತನ್ನ ದೇಹದಿಂದಲೇ ತೆಗೆದುಹಾಕುವುದಕ್ಕೆ ಉತ್ಸುಕವುಳ್ಳವನಾಗಿದ್ದನು.

ಪ್ರತ್ಯಕ್ಷವಾಗಿ ಅರಸನು ತಮ್ಮ ವಿಪತ್ತುಗಳಿಗೆ ಎಲೀಷನನ್ನೇ ಜವಾಬ್ದಾರನನ್ನಾಗಿಸಿದನು (ಎಲೀಷನ ಬಗೆಗೆ ಆತನ ತಂದೆಯ ಮಾತುಗಳನ್ನು ನೋಡಿರಿ [1 ಅರಸು 18:17]). ಎಲೀಷನ ಸಲಹೆಯು ದೋಷಯುಕ್ತವಾಗಿತ್ತು ಅಥವಾ ಪ್ರವಾದಿಯು ತಾನು ಮಾಡುತ್ತಿರುವ ಅದ್ಭುತೀಯ ಕಾರ್ಯಗಳನ್ನು ಇನ್ನೂ ಹೆಚ್ಚಾಗಿ ಮಾಡಬೇಕಿತ್ತು ಎಂದು ಆತನು ಯೋಚಿಸಿದನೇ? ಅರಸನು ಕೇವಲ ಗಲಿಬಿಲಿಗೊಂಡಿದ್ದನು ಮತ್ತು ತನಗೆಟಕುವ ಗುರಿಯನ್ನು ಸಾಧಿಸುವುದರಲ್ಲಿ ಇದ್ದನೇ? ಆತನ ಕಾರಣಗಳು ಏನೇ ಇರಲಿ, ರಾಜ್ಯದ ಕಷ್ಟದಲ್ಲಿ ಜವಾಬ್ದಾರಿಕೆಯನ್ನು ಒಪ್ಪಿಕೊಳ್ಳುವ ಬದಲು ಇತರರ ಮೇಲೆ ಸಿಟ್ಟಿಗೇಳುವದು ಮತ್ತು ಇತರರನ್ನು ದೂಷಿಸುವದು ಆತನಿಗೆ ಸರಳ ವಾಗಿ ಕಂಡಿರಬೇಕು.

ಯೋರಾಮನು ಒಬ್ಬ ಕೊಲೆಗಾರನನ್ನು ಕಳುಹಿಸಿದನು. ಆತನು ಆ ಮನುಷ್ಯನಿಗೆ ಎಲೀಷನು ಸಮಾರ್ಯ ಪಟ್ಟಣದಲ್ಲಿ ಎಲ್ಲಿ ಇರುತ್ತಾನೆ ಎಂಬುದರ ಬಗೆಗೆ ಹೇಳಿದನು ಮತ್ತು ಕೊಲೆಗಾಗಿ ಆತನಿಗೆ ಹಣವನ್ನು ಕೊಟ್ಟನು (2 ಅರಸು 6:32ಬಿ). ಕೊಲೆಗಾರನು ಅಲ್ಲಿಂದ ಹೊರಟ ಸ್ವಲ್ಪ ಸಮಯದಲ್ಲಿಯೇ ಅರಸನು ಎಲೀಷನ ಮನೆಗೆ ಹೋಗಲು ನಿರ್ಧರಿಸಿದನು ಬಹುಶಃ ಸಾಧ್ಯವಿದ್ದಷ್ಟು ಆ ಕಾರ್ಯವು ಸರಿಯಾಗಿ ಮಾಡಲ್ಪಡುವದೋ ಎಂಬುದನ್ನು ಖಚಿತ ವಾಗಿ ಪಡಿಸಿಕೊಳ್ಳುವುದಕ್ಕಾಗಿಯೇ.[12] ಆತನು ತನ್ನ ಅರಮನೆಯವರನ್ನು ತನ್ನೊಡನೆ ಕರೆದು ಕೊಂಡು ಹೋದನು (7:2).

ಇದೇ ಸಮಯದಲ್ಲಿ, ಎಲೀಷನು ಆ ಊರಿನ ನಾಯಕರಾದ ಊರ ಹಿರಿಯರೊಡನೆ ತನ್ನ ಮನೆಯಲ್ಲಿದ್ದನು (6:32ಎ). ಅರಸನ ಬದಲಾಗಿ ಈ ಜನರು ಪ್ರವಾದಿಯ ಜೊತೆಯಲ್ಲಿದ್ದರು ಎಂಬುದು ಎಂತಹ ಪ್ರಮುಖ್ಯವಾದ ವಿಷಯ. ಬಹುಶಃ ಅವರು ಸಮಾಧಾನವನ್ನು ಕಾಣಲೋ ಅಥವಾ ಸಲಹೆಯನ್ನು ಕೇಳಲೋ ಬಂದಿರಬಹುದು. ಅವರು ಪ್ರಾರ್ಥನೆಯಲ್ಲಿಯೂ ಕೂಡಾ ನಿರತರಾಗಿರಬಹುದು.

ಅರಸನ ಮರಣ ಶಾಸನವನ್ನು ಹೇಳಿ ಯೆಹೋವನು ಎಲೀಷನನ್ನು ಎಚ್ಚರಿಸಿದನು. ಪ್ರವಾದಿಯು ಈ ದಿವ್ಯ ನಿವೇದನೆಯನ್ನು ಊರ ಹಿರಿಯರಿಗೆ ತಿಳಿಸಿದನು: ''ನೋಡಿರಿ ಆ ಕೊಲೆಗಾರನ ಮಗನು ನನ್ನ ತಲೆಯನ್ನು ಹಾರಿಸುವುದಕ್ಕೆ ಆಳನ್ನು ಕಳುಹಿಸಿದ್ದಾನೆ'' (ವಚನ 32ಬಿ). ''ಇವರ ಮಗನು'' ಇದು ಸದಾ ಬೈಬಲ್ಲಿನಲ್ಲಿ ''ಪಾಲು ತೆಗೆದುಕೊಳ್ಳುವವರ ಸ್ವಭಾವದ'' ವಿಚಾರವನ್ನು ವ್ಯಕ್ತಪಡಿಸುವಾಗ ಬಳಸಲ್ಪಡುವಂತಹದ್ದಾಗಿದೆ. ''ಕೊಲೆಗಾರನ ಮಗನು'' ಆದಕಾರಣ ಇದರ ಅರ್ಥವು ''ಈ ಕೊಲೆಗಾರನು'' ಎಂಬುದಾಗಿದೆ. ಈ ಪ್ರಕರಣದಲ್ಲಿ, ಹೇಗೋ, ಅರಸನು ಕೊಲೆಗಾರನ ಮಗನಾಗಿದ್ದನು. ಆತನ ಆ ತಂದೆಯಾದ ಅಹಾಬನು, ನಾಬೋತನ ಕೊಲೆಯಲ್ಲಿ ಪಾಲ್ಗೊಂಡಿದ್ದನು (ನೋಡಿರಿ 1 ಅರಸು 21:8-14),

ಯೆಹೋವನ ಪ್ರವಾದಿಗಳ ಸಾಮೂಹಿಕ ಹತ್ಯಾಕಾಂಡವೂ ಇದರಲ್ಲಿ ಸೇರಿತ್ತು (ನೋಡಿರಿ 1 ಅರಸು 18:13), ಯೋರಾಮನು "ಕೊಲೆಗಾರನ ಮಗನಾಗಿದ್ದನು." ಅವನತಿಯಿಂದ ಮತ್ತು ಅಧೋಗತಿಯಿಂದ ಹೀಗೆ ಎರಡರಿಂದಲೂ ಆಗಿದ್ದವು.[13]

ಎಲೀಷನು ಊರ ಹಿರಿಯರಿಗೆ, "ಆಳು ಇಲ್ಲಿಗೆ ಬಂದ ಕೂಡಲೆ ನೀವು ಬಾಗಲನ್ನು ಮುಚ್ಚಿ ಅವನು ಒಳಗೆ ಬಾರದಂತೆ ಅದನ್ನು ಒತ್ತಿ ಹಿಡಿಯಿರಿ; ಅವನ ಹಿಂದೆಯೇ ಬರುತ್ತಿರುವ ಅವನೊಡೆಯನ ಕಾಲುಸಪ್ಪಳವು ಕೇಳಿಸುತ್ತದಲ್ಲಾ?" (2 ಅರಸು 6:32ಡಿ) ಎಂದು ಹೇಳಿದನು. ಅರಸನು ಬರುವ ಮುಂಚೆಯೇ ತನ್ನ ಸಂಹಾರಕನನ್ನು ಮನೆಯಿಂದ ಹೊರಗೆ ಇಡುವುದರಲ್ಲಿ ಆತನಿಗೆ ಸಹಾಯದ ಅವಶ್ಯಕತೆಯು ಇತ್ತು. ನಂತರ ಆತನು ಅದನ್ನು ಕಾರಣದೊಡನೆ ಅರಸನೊಂದಿಗೆಗೆ ಪ್ರಯತ್ನಿಸುವವನಿದ್ದನು.

ಎಲೀಷನು ಮಾತನಾಡುತ್ತಿದ್ದಂತೆಯೇ, ಸಂಹಾರಕನು[14] ಅಲ್ಲಿಗೆ ಬಂದನು (ವಚನ 33ಎ), ಆದರೆ ಸ್ಪಷ್ಟವಾಗಿ ಊರಹಿರಿಯರು ಆತನು ಒಳಗೆ ಬರದಂತೆ ತಡೆಯುವಲ್ಲಿ ಸಮರ್ಥರಾದರು. (ಆ ವೃದ್ಧ ಮನುಷ್ಯರು ತಮ್ಮ ಪ್ರತಿರೋಧದಿಂದ ಹೆಗಲನ್ನು ಬಾಗಿಲಿಗೆ ವಿರುದ್ಧವಾಗಿ ಚಾಚುತ್ತಲೇ ಇದ್ದಾರೆ, ಹೊರಗೆ ಗಟ್ಟಿಮುಟ್ಟಾದ ಸಂಹಾರಕನು ಬಾಗಿಲಿನ ಮೇಲೆ ಕುಟ್ಟುತ್ತಾ, "ನನ್ನನ್ನು ಒಳಗೆ ಬಿಡಿ! ನಾನು ಅರಸನ ಕೆಲಸದ ಮೇಲೆ ಬಂದಿದ್ದೇನೆ!" ಎಂದು ಕೂಗುತ್ತಲೇ ಇದ್ದಾನೆ.)

33ನೇಯ ವಚನದ ಕೊನೆಯಲ್ಲಿ, "ನೋಡು ಈ ಆಪತ್ತು ಯೆಹೋವನಿಂದಲೇ ಬಂದದ್ದು. ಇನ್ನು ಮುಂದೆ ನಾನೇಕೆ ಆತನನ್ನು ನಿರೀಕ್ಷಿಸಿಕೊಂಡಿರಬೇಕು ಅಂದನು" ಎಂದಿದೆ. ವ್ಯಾಕರಣ ನಿಯಮವು "ಆತನು" ಎಂಬುದು ದೂತನನ್ನೂ/ಸಂಹಾರಕನನ್ನೂ ಸೂಚಿಸುವಂತದ್ದಾಗಿದೆ ಎಂದು ಹೇಳುತ್ತದೆ, ಆದರೆ ಅನೇಕ ಲೇಖಕರು ಆ ಮಾತುಗಳಿಗೆ ಎಲೀಷನ ಪ್ರತಿಕ್ರಿಯೆಯ ಮಾತುಗಳಿಗೆ ಅರಸನೇ ಆ ಹೇಳಿಕೆಯನ್ನು ಹೇಳಿದ್ದಾನೆ ಎಂದು ಸೂಚಿಸುತ್ತಾರೆ (ನೋಡಿರಿ 7:17ಬಿ; ಗಮನಿಸಿರಿ ವಚನಗಳು 1, 2). NIVಯ "ಅರಸನು ಹೇಗೆ ಹೇಳಿದನು ಈ ಅಪತ್ತು ಯೆಹೋವನಿಂದಲೇ ಬಂದದ್ದು ..." ಎಂದಿದೆ. CJBಯಲ್ಲಿ "ದೂತನು ಅರಸನ ಸಂದೇಶದಡನೆ ತಲುಪಿದನು ಎಂದಿದೆ ..."

ಯೋರಾಮ ಮತ್ತು ಆತನ ಸೇವಕನು ಅಂತಿಮವಾಗಿ ಅಲ್ಲಿಗೆ ತಲುಪಿದರು, ಅರಸ ಮತ್ತು ಪ್ರವಾದಿಯ ಮಧ್ಯ ಲಘು ವಿನಿಮಯಗಳಾದವು. ಅರಸನು ಸ್ಪಷ್ಟವಾಗಿ ಇನ್ನೂ ಕೋಪದಿಂದಲೇ ಇದ್ದನು, "ಕೆಂಪಾದ ಮುಖದಿಂದ, ಊದಿದ ಕಣ್ಣು. ಹಣೆಯ ನರಗಳು ಉಬ್ಬಿಕೊಂಡಿದ್ದ ಆತನನ್ನು ನಾನು ನೋಡಬಲ್ಲೆನು?" ಆತನ ಧ್ವನಿಯಲ್ಲಿನ ರೋಷವನ್ನು ನಾನು ಕೇಳಬಲ್ಲೆ ಆತನು ಹೇಳಿದನು "ಈ ಆಪತ್ತು ಯೆಹೋವನು [ನಮ್ಮ ಸ್ವಂತದ ತಪ್ಪಿಗಲ್ಲ] ನಮ್ಮ ತೊಂದರೆಗೆ ಜವಾಬ್ದಾರನಾಗಿದ್ದಾನೆ! ಎಲೀಷನು, ನಿನ್ನ ದೇವರು ನಮ್ಮನ್ನು ಬಿಡಿಸುವನು ಎಂದು ನೀನು ವಾಗ್ದಾನಮಾಡಿದ್ದಿ, ಆದರೆ ಸಂಗತಿಗಳು ಕೆಟ್ಟದ್ದಾಗುತ್ತಾ ಹೋಗುತ್ತಿವೆ. ಒಳ್ಳೇಯವಲ್ಲ, ನಾನು ತಾಳ್ಮೆಯುಳ್ಳ ಮನುಷ್ಯನು, ಆದರೆ ನಾನು ಬಲುದಿನಗಳವರೆಗೆ ಕಾಯ್ದೆನು!"

ಅರಸನು ಪರಿಸ್ಥಿತಿಯ ಮೇಲೆ ಕೋಪಗೊಂಡಿದ್ದನು ಮತ್ತು ಪ್ರವಾದಿಯ ಮೇಲೆ ಕೋಪಗೊಂಡಿದ್ದನು, ಆದರೆ ಅದು ಸತ್ಯವನ್ನು ಬದಲಾಯಿಸದು, ಜನರ ನಾಯಕನಾದಂತಹ ಆತನು ಅವರ ಸಂಕಷ್ಟಕ್ಕೆ ಜವಾಬ್ದಾರನಾಗಿದ್ದನು. ಇಂದು ಕೆಲವರು ದೇವರ ಸತ್ಯದೊಂದಿಗೆ ಕೋಪದಿಂದ ಪ್ರತಿಕ್ರಿಯಿಸುತ್ತಾರೆ, ಆದರೆ ಅದು ಸತ್ಯವನ್ನು ಬದಲಾಯಿಸದು. ಪೌಲನು ಗಲಾತ್ಯದವರಿಗೆ "ನಾನು ಸತ್ಯವನ್ನು ಹೇಳುವುದರಿಂದ ನಿಮಗೆ ಶತ್ರುವಾಗಿದ್ದನೋ" ಎಂದು ಕೇಳುತ್ತಾನೆ (ಗಲಾತ್ಯ 4:16) ಅನೇಕರನ್ನು ಕ್ಯಾಥೋಲಿಕ್ ರಿಂದ ಪರಿವರ್ತಸಿದಂತಹ ಜೋ ಮಾಲೋನ್ ಸರಳವಾಗಿ ಮಾತನಾಡುವ ಬೋಧಕನಾಗಿದ್ದನು. ಒಂದು ನಿರ್ದಿಷ್ಟವಾದ ಬಲವಾದ ಹೇಳಿಕೆಯ ನಂತರ, ಆತನು "ನಾನು ನಿಮ್ಮ ವೈರಿಯಲ್ಲ ಯಾಕೆಂದರೆ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ ಎಂಬುದನ್ನು ಸೇರಿಸಿದ್ದಾನೆ!"

## ಸತ್ಯವನ್ನು ಸಂದೇಹಿಸುವದು ಸತ್ಯವನ್ನು ಬದಲಾಯಿಸದು (7:1-6)

**ವಾಗ್ದಾನವು ಘೋಷಿತವಾಯಿತು**

ಅಪಾಯದ ಗಾಳಿಯು ಅಲ್ಲೆಲ್ಲಾ ತುಂಬಿತ್ತು. ಎಲೀಷನು ಪರಿಸ್ಥಿತಿಯನ್ನು ನಿಭಾಯಿಸದೆ ಹೋಗಿದ್ದರೆ, ಆತನ ತಲೆಯು ಆತನ ದೇಹವನ್ನು ಬಿಟ್ಟುಬಿಟ್ಟಿರುತ್ತಿತ್ತು. ಆತನು ಬಲು ದಿನದವರೆಗೆ ಕಾಯಬೇಕಿಲ್ಲ - ಕೇವಲ ಒಂದೇ ದಿನ - ಮತ್ತು ದೇವರು ಆ ಸಮಸ್ಯೆಯನ್ನು ತೀರಿಸುತ್ತಾನೆ ಎಂದು ಆತನು ಬೇಗನೆ ಅರಸನಿಗೆ ಭರವಸೆಯನ್ನು ಕೊಟ್ಟನು. ಪ್ರವಾದಿಯು ಅದನ್ನು ಹೇಗೆ ಹೇಳಿದನು ಎಂಬುದು ಇಲ್ಲಿದೆ: "ಯೆಹೋವನ ವಾಕ್ಯವನ್ನು ಕೇಳು; ಆತನು - ನಾಳೆ ಇಷ್ಟು ಹೊತ್ತಿಗೆ ಸಮಾರ್ಯಪಟ್ಟಣದ ಬಾಗಲಿನಲ್ಲಿ [ಒಂದು ಅಳತೆಯ] ಗೋಧಿ ಹಿಟ್ಟು ರುಪಾಯಿಗೆ ಹನ್ನೆರಡು ಸೇರಿನಂತೆಯೂ [ಎರಡು ಅಳತೆಯ] ಜವೆಗೋಧಿಯು ಇಪ್ಪತ್ತನಾಲ್ಕು ಸೇರಿನಂತೆಯೂ ಮಾರಲ್ಪಡುವವು ಎಂದು ಹೇಳಿದನು" (ವಚನ 1). "ಒಂದು ಅಳತೆಯ ಗೋಧಿ ಹಿಟ್ಟು" ಎಂದರೆ ಸುಮಾರು ಗ್ಯಾಲನ್ನಿನ ಆರು ಕಾಲು ಭಾಗ, "ಎರಡು ಅಳತೆಯ ಜವೆ ಗೋಧಿಯು" ಅರ್ಧ ಹೆಚ್ಚು ಕಡಿಮೆ ಗ್ಯಾಲನ್ನ ಇರಬಹುದು ಈಗ ಇದ್ದ ಬೆಲೆಯು ಆಕ್ರಮಣದ ಪೂರ್ವದಲ್ಲಿ ಇದ್ದ ಬೆಲೆಗಿಂತ ಸ್ವಲ್ಪ ಹೆಚ್ಚು ಆಗಿತ್ತು. ಕತ್ತೆಯ ತಲೆಯು ಪ್ರಸ್ತುತವಾಗಿ ಎಲೀಷನು ಹೇಳಿದ ಸುಮಾರು ಗ್ಯಾಲನ್ನಿನ ಆರು ಕಾಲು ಭಾಗದ "ಗೋಧಿ ಹಿಟ್ಟು" ಮಾರಲ್ಪಡುವದಕ್ಕಿಂತ *ಎಂಭತ್ತು ಪಟ್ಟು* ಹೆಚ್ಚಿನದರಲ್ಲಿ ಮಾರಾಟವಾಗುತ್ತಿತ್ತು (6:25; 7:1)! ಪ್ರವಾದಿಯ ಪ್ರಕಾರ, ಪರಿಸ್ಥಿತಿಯಲ್ಲಿನ ಈ ನಾಟಕೀಯ ಬದಲಾವಣೆಯು ಕೇವಲ ಇಪ್ಪತ್ನಾಲ್ಕು ಗಂಟೆಗಳಲ್ಲಿ ಸಂಭವಿಸಿತು!

ಇದೊಂದು ಅದ್ಭುತವಾದ ಪ್ರವಾದನೆ ಮತ್ತು ಬಾಯಿ ಮೂಲಕ ಹೇಳಲ್ಪಡುವ ಮುಂತಿಳಿಸವಿಕೆ ಆಗಿತ್ತು. ವೈರಿಗಳು ಪಟ್ಟಣವನ್ನು ಇನ್ನೂ ಸುತ್ತುವರೆದಿತ್ತು; ಹಸಿವಿನಿಂದ ಮಕ್ಕಳು ಇನ್ನೂ ಊಟಕ್ಕಾಗಿ ಅಳುತ್ತಿದ್ದವು. ಮಾನವನ ದೃಷ್ಟಿಕೋನದಿಂದ, ಎಲೀಷನ ಮಾತುಗಳು ನಿಜವಾಗಬೇಕಾದುದಕ್ಕೆ ಯಾವ ಸಾಧ್ಯತೆಗಳೂ ಇರಲಿಲ್ಲ. Burton Coffman ಬರೆಯುವುದೇನೆಂದರೆ "ಒಂದು ವೇಳೆ ಯಾವುದಾದರು ಪ್ರವಾದನೆಯು ಅತೀ ಅಸಾಧ್ಯ ಅಂದುಕೊಳ್ಳುವುದಾಗಿದ್ದರೆ ಅದು ಇದು ಹಾಗಿತ್ತು!"[15]

ಅರಸನ ಜೊತೆ ಬಂದ ಅರಸನ ಸರದಾರನು ಗೇಲಿ ಮಾಡುತ್ತಾ "ಯೆಹೋವನು ಆಕಾಶದಲ್ಲಿ ದ್ವಾರಗಳನ್ನು ಮಾಡಿದರೂ ಇದು ಸಂಭವಿಸಲಾರದು?" (7:2ಎ) ಎಂದನು. ಆತನ ಹೇಳಿಕೆಯನ್ನು ಈ ರೀತಿಯಲ್ಲಿ ವಿಶೇಧೀಕರಿಸಬಹುದು "ನೋಹನನ ಕಾಲದಲ್ಲಿ ಮಾಡಿದಂತೆ [ಆದಿಕಾಂಡ 7:11 ರೊಂದಿಗೆ ಹೋಲಿಸಿರಿ] ದೇವರು ಸ್ವರ್ಗದ ದ್ವಾರಗಳನ್ನು ತೆರೆದು, ಮಳೆಯ ಬದಲಾಗಿ ಧಾನ್ಯದ ಮಳೆಯು ಬರುವಂತಹ ಸಂಗತಿಯು ಅಸಾಧ್ಯ ವಾದದ್ದು!" ಇದು ಎಂಥ ಸಂಧರ್ಭವಾಗಿತ್ತೆಂದರೆ ಮನುಷ್ಯನು ತನ್ನ ಬಾಯಿಯನ್ನು ಮುಚ್ಚಿಕೊಂಡಿರಬೇಕಿತ್ತು. ಆ ಸರದಾರನು ಕೇವಲ ಪ್ರವಾದಿಯ ಮಾತುಗಳನ್ನು ಪ್ರಶ್ನಿಸುತ್ತಿಲ್ಲ, ಆದರೆ ದೇವರ ಶಕ್ತಿಯ ಬಗೆಗೆ ತನ್ನ ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾನೆ. ಯೇಸುವಿನ ಮಾತುಗಳು ಈ ಮನುಷ್ಯನಿಗೆ ಅನ್ವಯಿಸಬಹುದಾಗಿದೆ: "ಎಲಾ ಬುದ್ಧಿಯಿಲ್ಲದವರೇ, ಪ್ರವಾದಿ ಗಳು ಹೇಳಿದ್ದೆಲ್ಲವನ್ನು ನಂಬುವುದರಲ್ಲಿ ಮಂದ ಹೃದಯರೇ!" (ಲೂಕ 24:25).

ಎಲೀಷನು ಆ ಧರ್ಮವಿರೋಧಿಯತ್ತ ನೋಡಿದನು ಮತ್ತು ಗೂಢವಾದ ಮಾತು ಗಳನ್ನು ಹೇಳಿದನು: "ಅದು ಸಂಭಿಸುವಿದನ್ನು ನೀನು ಕಣ್ಣಾರೆ ಕಾಣುವಿ, ಆದರೆ ಅದನ್ನು ಅನುಭವಿಸುವುದಿಲ್ಲ" (2 ಅರಸು 7:2ಬಿ) - ಇನ್ನೊಂದು ಪ್ರವಾದನೆಯು "... ಅದು ಸಾಧ್ಯವೇ ಇಲ್ಲ ಎಂಬುದಾಗಿ ಅದು ಸೂಚಿಸುತ್ತಿತ್ತು."[16] ಈ ಅಂಶದಲ್ಲಿ ಅರಸ ಮತ್ತು ಆತನ ಸರದಾರನು ಅಲ್ಲಿಂದ ಹೋಗಿರಬೇಕು. ಅರಸನು ಧರ್ಮವಿರೋಧಿಯಾಗಿರ ಬೇಕು, ಆದರೆ ಆತನು ಏನು ಸಂಭವಿಸಬಹುದೆಂದು ನೋಡುವುದಕ್ಕಾಗಿ ಇನ್ನೊಂದು ದಿನದವರೆಗೆ ಕಾಯಲು ಸಿದ್ಧನಿದ್ದನು.

ಆ ಹಸ್ತಕನು "ನೋಡು ಆದರೆ ತಿನ್ನಬೇಡ ... ನೋಡು ಆದರೆ ತಿನ್ನಬೇಡ ... ನೋಡು ಆದರೆ ತಿನ್ನಬೇಡ ... ಈ ವೃದ್ಧನ ಹುಚ್ಚು ಮಾತಿನ ಸಾಧ್ಯತೆಗೆ *ಅರ್ಥವುಂಟಾ?*" ಎಂದು ತನ್ನೊಳಗೆ ಒಟಗುಟ್ಟುತ್ತಿರಬೇಕು ಎಂದು ನಾನು ಊಹಿಸುತ್ತೇನೆ.

**ವಾಗ್ದಾನವು ಸಂಪೂರ್ಣವಾಯಿತು**

ಎಲೀಷನ ಪ್ರವಾದನೆಯು ಹೇಗೆ ಕಾರ್ಯಗತವಾಗಲು ಸಾಧ್ಯ? ಅದನ್ನೇ ಉಳಿದ ಕತೆಯು ಹೇಳುವಂತಹದ್ದಾಗಿದೆ. ವಚನ 3ರಲ್ಲಿ, "ಊರಬಾಗಿಲಿನ ಹತ್ತಿರ ನಾಲ್ಕು ಮಂದಿ ಕುಷ್ಠರೋಗಿಗಳಿದ್ದರು, ಅವರು ತಮ್ಮೊಳಗೆ - ನಾವು ಸಾಯುವತನಕ ಇಲ್ಲೇ ಕೂತಿರಬೇಕೋ" (ವಚನ 3) ಎಂದು ಮಾತನಾಡಿಕೊಂಡರು. ಅಂತಿಮವಾಗಿ ಅವರು ತಮ್ಮನ್ನು ತಾವು ವೈರಿಗಳ ಕರುಣೆಗೆ ಒಪ್ಪಿಸಿಕೊಡುವುದಕ್ಕಾಗಿ ನಿರ್ಧರಿಸಿಕೊಂಡರು (ವಚನ 4). ಅವರು ಪಾಳಯದ ಅಂಚಿಗೆ ಬಂದರು, ಆದರೆ ಅಲ್ಲಿ ಅವರಿಗೆ ಆಶ್ಚರ್ಯವು ಕಾದಿತ್ತು. ಅಲ್ಲಿ ಒಬ್ಬನೂ ಇರಲಿಲ್ಲ (ವಚನ 5).

> ಕರ್ತನು ಅರಾಮ್ಯರ ಪಾಳಯದವರಿಗೆ ರಥರಥಾಶ್ವ ಸಹಿತವಾದ ಮಹಾಸೈನ್ಯದ ಘೋಷವು ಕೇಳುವಂತೆ ಮಾಡಿದ್ದರಿಂದ ಅವರು "ಇಸ್ರಾಯೇಲ್ಯ ಅರಸನು ಹಿತ್ತಿಯ, ಐಗುಪ್ತ ಇವುಗಳ ಅರಸರಿಗೆ ಹಣಕೊಟ್ಟು ಅವರನ್ನು ನಮಗೆ ವಿರೋಧವಾಗಿ ಕರೆ ತಂದಿದ್ದಾನೆ ಅಂದುಕೊಂಡರು" (ವಚನ 6).

ಅರಾಮ್ಯರು ತಮ್ಮ ಜೀವರಕ್ಷಣೆಗಾಗಿ ಪಾಳಯದಲ್ಲಿದ್ದುದ್ದೆಲ್ಲವನ್ನೂ ಬಿಟ್ಟು ಓಡಿಹೋಗಿದ್ದರು (ವಚನ 7). ಕುಷ್ಠರೋಗಿಗಳು ಆ ಪಾಳಯದ ಅಂಚಿಗೆ ಬಂದಾಗ ಅದು ಖಾಲಿಯಾಗಿತ್ತು ಆಗ ಅವರ ಸಂತಸವು ಇಮ್ಮಡಿಯಾಯಿತು (ವಚನ 8). ಅವರು ಹೊಟ್ಟೆತುಂಬಾ ತಿಂದು ಕುಡಿದರು ಮತ್ತು ಆ ಡೇರೆಯನ್ನು ಸೂರೆಮಾಡಿದರು (ವಚನ 9), ನಂತರ ಅವರು ಬಾಗಿಲು ಕಾಯುವವರ ಹತ್ತಿರ ಹೋಗಿ ವೈರಿಗಳು ಓಡಿಹೋಗಿರುವ ವಿಷಯವನ್ನು ಹೇಳಿದರು (ವಚನ 10). ಈ ವಾರ್ತೆಯ ಅರಸನಿಗೆ ಹೋಯಿತು (ವಚನ 11). ಮೊದಲು ಆತನು ಸಂದಿಗ್ಧತೆಗೆ ಒಳಗಾದನು (ವಚನ 12); ಆದರೆ ಆತನು ಆ ಕಥೆಯನ್ನು ಪರೀಕ್ಷಿಸಿದಾಗ, ಅದು ನಿಜವಾಯಿತು: ವೈರಿಗಳು ಓಡಿಹೋಗಿದ್ದರು (ವಚನಗಳು 13-15)!

ಆ ಸುದ್ಧಿಯು ಬೇಗನೇ ಹರಡಿತು, ಮತ್ತು ಬಾಗಿಲುಗಳು ಕ್ಷಿಪ್ರವಾಗಿ ತೆರೆದವು. ಜನರು ಸಾಗರದಂತೆ ಪಟ್ಟಣದ ಹೊರಗೆ ಓಡಿದರು ಮತ್ತು ಡೇರೆಗಳನ್ನು ಲೂಟಿಮಾಡಿದರು (ವಚನ 16ಎ). ಅಲ್ಲಿ ಅನೇಕ ಧಾನ್ಯಗಳು ಉಳಿದುಹೋಗಿದ್ದವು. ಎಲೀಷನ ಭವಿಷ್ಯದಂತೆ ಗೋಧಿ ಹಿಟ್ಟು ರುಪಾಯಿಗೆ ಹನ್ನೆರಡು ಸೇರಿನಂತೆಯೂ ಜವೆಗೋದಿಯು ಇಪ್ಪತ್ತನಾಲ್ಕು ಸೇರಿನಂತೆಯೂ ಮಾರಾಟವಾಯಿತು (ವಚನ 16ಬಿ).

ಧರ್ಮವಿರೋಧಿಯಾದ ಹಸ್ತಕನ ಬಗೆಗೆ ಪ್ರವಾದನೆಯು ಏನು ಹೇಳಿತ್ತು ಈ ಸೋಪಿಯಾದ ಆಹಾರ ಪದಾರ್ಥಗಳನ್ನು ಆತನು ನೋಡಿದನು ಆದರೆ ಆತನು ತಿನ್ನಲಾರದೇ ಇರುವನೆಂದೇ? ವೈರಿಗಳ ಡೇರೆಯ ಖಾಲಿಯಾಗಿದ್ದನ್ನು ಕೇಳಿದ ಜನರು ದೊಂಬಿಯೇಳುವುದನ್ನು ಅರಸನು ಮೊದಲೇ ನಿರೀಕ್ಷಿಸಿದ್ದನು. ಆದ್ದರಿಂದ ಆತನು, "ಹಸ್ತಕನನ್ನು ... ಊರಬಾಗಿಲ ಹತ್ತಿರ ಕಾಯುವುದಕ್ಕೆ ಕಳುಹಿಸಿದನು" (ವಚನ 17ಎ) - ಬಹುಶಃ ಆ ಸರದಾರನು ಇದನ್ನು ದೊಡ್ಡ ಮರ್ಯಾದೆ ಎಂದು ಭಾವಿಸಿರಬೇಕು. ಆತನು ಬಾಗಿಲಿನ ಬಳಿಯಲ್ಲಿ ತನ್ನ ಹೊಳೆ ಯುವ ನಿಲುವಂಗಿಯೊಡನೆ, ಕೈಗಳನ್ನು ಎತ್ತಿ ಶಾಂತವಾಗಿ ಹೀಗೆ ಹೇಳುತ್ತಿರಬಹುದು: "ಆಜ್ಞೆಯ ಪ್ರಕಾರ, ನಡೆಯಿರಿ ಓಡಬೇಡಿರಿ" ಎಂದು ಹೇಳುತ್ತಿರುವುದನ್ನು ನಾವು ಚಿತ್ರಿಸಿಕೊಳ್ಳುತ್ತೇನೆ. ಆತನ ಧ್ವನಿಯು ಏರುತ್ತಲಿರುವುದನ್ನು ನಾನು ಕೇಳಬಲ್ಲೆ: "ಆಜ್ಞೆಯಿದೆ. ನೂಕಬೇಡಿರಿ! ನೂಕಲಾಟಕ್ಕೆ ಯಾವ ಅವಶ್ಯಕತೆಯೂ ಇಲ್ಲ! ಅಲ್ಲಿ

ಎಲ್ಲರಿಗೂ ಎಲ್ಲವೂ ಇದೆ!" ನಂತರ ದೆಸೆಗೆಟ್ಟ ಜನರು ಆತನೆಡೆಗೆ ಹೋದರು, ಉದ್ರೇಕಗೊಂಡ ಆತನು ಕೈಗಳನ್ನು ಮೇಲಕ್ಕೆ ಅಲ್ಲಾಡಿಸುತ್ತಾ ಇರುವುದನ್ನು ನಾನು ನೋಡಬಲ್ಲೆ. ಆತನ ಕೀರಲು ಧ್ವನಿಯನ್ನು ನಾನು ಕೇಳಬಲ್ಲೆ: "ಶಾಂತರಾಗಿರಿ! ಶಾಂತರಾಗಿರಿ! ಶಾಂತ ..." ವಚನವು ಹೇಳುವುದೇನೆಂದರೆ ಜನರಿಂದ "ಆತನು ತುಳಿಯಲ್ಪಟ್ಟು ಸತ್ತನು" ಎಂದು (ವಚನ 17ಬಿ). ನಾನು ಜನರು ಬೆಂಕಿಯಿಂದ ಮತ್ತು ಅಪಾಯಕಾರಿ ಸಂಗತಿಗಳೆಡೆಯಿಂದ ಬಲುಸಂಖ್ಯೆಯ ಜನರು ಓಡಿಬರಲು ಪ್ರಯತ್ನಿಸುತ್ತಾ ಹರಡುವುದನ್ನು ನಾನು ನೋಡಿದ್ದೇನೆ.

ಹೀಗೆ ಆ ಸರದಾರನಿಗೆ "ದೇವರ ಮನುಷ್ಯನು ... ಹೇಳಿದ ಮಾತು ನೆರವೇರಿತು" (ವಚನ 17ಸಿ). "ದೇವರ ಮನುಷ್ಯನು ಹೇಳಿದಂತೆ ... ನೆರವೇರಿತು" ಎಂಬ ಮಾತನ್ನು ಒತ್ತಿಹೇಳಿರಿ. ಎಲೀಷನು ಈ ಸಂಶಯಸ್ಥನಿಗೆ ನೋಡಬಹುದು ಆದರೆ ತಿನುವುದಿಲ್ಲ ಎಂದು ಹೇಳಿದ್ದನು. ಮತ್ತು ಅದೇ ರೀತಿಯಲ್ಲಿಯೇ ಅದು ಅಸಂಭವಿಸಿತು. ಸತ್ಯವನ್ನು ಸಂಶಯಿಸುವುದರಿಂದ ಸತ್ಯವನ್ನು ಬದಲಾಯಿಸಲಾಗದು; ಇದು ಇನ್ನೂ ಸತ್ಯ.

ಕೆಲವರು ಸತ್ಯಕ್ಕೆ ವಿಧೇಯರಾಗುವುದನ್ನು ಬಿಟ್ಟು ಅದನ್ನು ಹಾಸ್ಯಮಾಡುವುದರಲ್ಲಿ ಸರಳತೆಯನ್ನು ಕಂಡುಕೊಂಡಿದ್ದರೆ. ಇಸ್ರಾಯೇಲ್ಯರು ಬೆಬಿಲೋನಿಗೆ ಸೆರೆಯಾಳಾಗಿ ಒಯ್ಯಲ್ಪಟ್ಟದಕ್ಕೆ ವಿವರಣೆಯನ್ನು ಕೊಡುವಾಗ "ಅವರು ದೇವ ಪ್ರೇಶಿತರನ್ನು ಗೇಲಿಮಾಡಿ ಆತನ ಮಾತುಗಳನ್ನು ತುಚ್ಛೀಕರಿಸಿ ಆತನ ಪ್ರವಾದಿಗಳನ್ನು ಹಿಯಾಳಿಸಿದ್ದರಿಂದ ಆತನ ಕೋಪಾಗ್ನಿಯು ಆತನ ಪ್ರಜೆಯ ಮೇಲೆ ಉರಿಯಹತ್ತಿತ್ತು" (2 ಪೂರ್ವಕಾಲವೃತ್ತಾಂತ 36:16) ಎಂದು ಅದು ಹೇಳುತ್ತದೆ. ಹೊಸ ಒಡಂಬಡಿಕೆಯಲ್ಲಿ "ಕಡೇ ದಿವಸಗಳಲ್ಲಿ ತಮ್ಮ ದುರಾಶೆಯ ಪ್ರಕಾರ ನಡೆಯುವ ಕುಚೋದ್ಯಗಾರರು ಬಂದು ಕುಚೋದ್ಯ ಮಾಡುತ್ತಾರೆ" (2 ಪೇತ್ರ 3:3). ಸಂದೇಹಿಸುವವರು ಪುನರುತ್ಥಾನದ ಎಲ್ಲಾ ಬೈಬಲ್ ಸತ್ಯಗಳನ್ನು (ನೋಡಿರಿ ಅಪೊಸ್ತಲರ ಕೃತ್ಯಗಳು 17:32) ಎರಡನೆಯ ಬರೋಣವನ್ನು (ನೋಡಿರಿ 2 ಪೇತ್ರ 3:3, 4) ಮೂದಲಿಸುವವರಾಗಿದ್ದಾರೆ.[17]

ದೇವರ ವಾಕ್ಯವನ್ನು ಹಂಗಿಸುವವರು ತಮ್ಮನ್ನು ತಾವು ಜಾಣರೆಂದುಕೊಳ್ಳುತ್ತಾರೆ, ಆದರೆ ಬೈಬಲ್ ಅವರನ್ನು "ಮೂರ್ಖರು" ಎಂದು ಕರೆಯುತ್ತದೆ (ನೋಡಿರಿ ಜ್ಞಾನೋಕ್ತಿ 14:9). ಯಾಕೋಬನು ಸಂದೇಹಪಡುವವರ ಚಂಚಲತೆಯ ಬಗೆಗೆ "ಸಂದೇಹಪಡುವವನೋ ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು" ಎಂದು ಹೇಳಿದ್ದಾನೆ (ಯಾಕೋಬ 1:6). ಕೊನೆಯಲ್ಲಿ, ಯಾರು ಮೂದಲಿಸುತ್ತಿರುತ್ತಾರೋ ಅವರು ದೇವರಿಂದ ಮೂದಲಿಸಲ್ಪಡುತ್ತಾರೆ (ನೋಡಿರಿ ಜ್ಞಾನೋಕ್ತಿ 3:34). ಒಬ್ಬನು ದೇವರನ್ನೂ ಆತನ ವಾಕ್ಯಗಳನ್ನೂ ಕಷ್ಟದ ಪರಿಣಾಮ ಶಕ್ತಿಯ ಅನುಭವವಿಲ್ಲದೆ ಆತನನ್ನು ಮೂದಲಿಸಲಾರನು (ನೋಡಿರಿ ಗಲಾತ್ಯ 6:7, 8)!

ಬೈಬಲ್ ಸತ್ಯವನ್ನು ಬೋಧಿಸುವಾಗ ಅದನ್ನು *ನಂಬು,* ಅದನ್ನು ನೀನು ಅರ್ಥೈಸಿಕೊಳ್ಳದಿದ್ದರೂ ಕೂಡಾ, ಅದನ್ನು ನಂಬು. ಅದು ಮಾನವನ ಅಳತೆಯನ್ನು ಮೀರಿದಂತೆ ಕಂಡರೂ ಅದನ್ನು ನಂಬು (ನೋಡಿರಿ ಯೆಶಾಯ 55:8, 9). ಸತ್ಯವನ್ನು ಸಂದೇಹಿಸುವದು ಸತ್ಯವನ್ನು ಎಂದಿಗೂ ಬದಲಾಯಿಸದು; ಅದು ಸತ್ಯವನ್ನು ಉಳಿಸುತ್ತದೆ.

## "ಸತ್ಯವೇ ಸತ್ಯ ಸತ್ಯವೇ ಸತ್ಯ" (7:18-20)

ಇದು ಕಥೆಯ ಅಂತ್ಯ ಎಂದು ಕಂಡುಬಂದರೂ ಲೇಖಕನು ಅದನ್ನು ಮುಗಿಸಲಾರನು:

> ಹೀಗೆ ದೇವರ ಮನುಷ್ಯನು ಅರಸನ ಜೊತೆಯಲ್ಲಿ ತನ್ನ ಬಳಿಗೆ ಬಂದಿದ್ದ ಆ ಸರದಾರನಿಗೆ ಹೇಳಿದ ಮಾತುನೆರವೇರಿತು. ಅವನು ಅರಸನಿಗೆ - ನಾಳೆ ಇಷ್ಟು ಹೊತ್ತಿಗೆ ಸಮಾರ್ಯಪಟ್ಟಣದ ಬಾಗಲಿನಲ್ಲಿ ಜವೆಗೋಧಿಯು ರುಪಾಯಿಗೆ ಇಪ್ಪತ್ತುನಾಲ್ಕು ಸೇರಿ

> ನಂತೆಯೂ ಗೋಧಿಹಿಟ್ಟು ಹನ್ನೆರಡು ಸೇರಿನಂತೆಯೂ ಮಾರಲ್ಪಡುವವು ಎಂದು ಹೇಳಿದಾಗ ಆ ಸರದಾರನು - ಯೆಹೋವನು ಆಕಾಶದಲ್ಲಿ ದ್ವಾರಗಳನ್ನು ಮಾಡಿದರೂ ಇದು ಸಂಭವಿಸಲಾರದು ಅಂದದರಿಂದ. ದೇವರ ಮನುಷ್ಯನು ಅವನಿಗೆ - ನೀನು ಅದನ್ನು ಕಣ್ಣಾರೆ ಕಾಣುವಿ; ಆದರೆ ಅನುಭವಿಸುವುದಿಲ್ಲ ಎಂದು ನುಡಿದಿದ್ದನು. ಅವನು ಊರಬಾಗಲಿನಲ್ಲಿ ಜನರಿಂದ ತುಳಿಯಲ್ಪಟ್ಟು ಸತ್ತದರಿಂದ ಈ ಮಾತು ನೆರವೇರಿತು (ವಚನಗಳು 18-20).

ಇತರ ಪೀಠಿಕೆಯಲ್ಲಿ ಹೇಳಲ್ಪಟ್ಟ ಅಂಶದಂತೆ, ಲೇಖಕನು ಆ ಕಥೆಯ ಮಹತ್ವದ ಅಂಶವು ಓದುಗರಿಂದ ಬಿಟ್ಟು ಹೋಗಬಾರದೆಂದು ಬಯಸುವವನಾಗಿದ್ದನು, ಹೀಗೆ ಆತನು ಪರಾಕಾಷ್ಟೆಯ ಈ ಅಂಶವನ್ನು ಪುನರಾವರ್ತಿಸುತ್ತಿದ್ದಾನೆ (ವಚನ 16 ಮತ್ತು 18 ರೊಂದಿಗೆ ಹೋಲಿಸಿರಿ). ಇಲ್ಲಿನ ಮಹತ್ವದ ಪದಗಳೆಂದರೆ, "ದೇವರ ಮನುಷ್ಯನು ಅರಸನ ಜೊತೆಯಲ್ಲಿ ತನ್ನ ಬಳಿಗೆ ಬಂದಿದ್ದ ಆ ಸರದಾರನಿಗೆ ಹೇಳಿದ ಮಾತು ನೆರವೇರಿತು" (ವಚನ 18ನ್ನು; ನೋಡಿರಿ 17ಸಿ) ಎಂಬುದೇ. ಹೇಗೆ ಒಬ್ಬ ಪ್ರವಾದಿಯ ನಿಜವಾದ ಪರಿಕ್ಷೆಯೆಂದರೆ ಆತನ ಕಾರ್ಯಗಳು ನೆರವೇರುತ್ತವೆಯೋ ಇಲ್ಲವೋ ಎನ್ನುವದು (ಧರ್ಮೋಪದೇಶಕಾಂಡ 18:21, 22); ಎಲೀಷನು ಪ್ರವಾದನೆಯು ನಿಜವಾಯಿತು. ಅರಸನ ಸರದಾರನು ಆತನೆಡೆಗೆ ಹಾಸ್ಯದ ಮಾತುಗಳನ್ನು ಆಡಿದನು ಆದರೆ ಅವು ಸತ್ಯವಾಗಿ ಹೋದವು ಹೀಗಾಗಿ ಎಲೀಷನ ಮಾತುಗಳನ್ನು ನಂಬುವಂತಹ ಕಠಿಣ ಪರಿಸ್ಥಿತಿ ಅರಸನಿಗಿತ್ತು.

ಒಬ್ಬ ಕವಿಯು ಒಂದು ಕವಿತೆಯನ್ನು ಹೀಗೆ ಬರೆದನು. "ಗುಲಾಬಿಯು ಗುಲಾಬಿಯಾಗಿದೆ, ಗುಲಾಬಿಯು ಗುಲಾಬಿಯಾಗಿದೆ."[18] ಅಪದಗಳಿಂದ ನಾವು ಏನನ್ನೂ ಪಡೆಯದಿದ್ದದ್ದೇ ಆದರೆ, ಈ ಮಾತುಗಳು ಯಾವ ಅರ್ಥವನ್ನು ಸೂಚಿಸದಿದ್ದರೂ ಸಹ ಗುಲಾಬಿಯು ಗುಲಾಬಿಯೇ ಆಗಿದೆ ಎಂಬುದರಿಂದ ನಾವು ಪ್ರಭಾವಿತರಾಗು ತ್ತೇವೆ. ಕವಿಯ ಈ ಮಾತುಗಳಿಗೆ ಅನ್ವಯಿಸಿ ನಾವು ಹೀಗೆ ಹೇಳಬಹುದು: ಸತ್ಯವೇಸತ್ಯ ಸತ್ಯವೇ ಸತ್ಯ. ಅಜ್ಞಾನವು ಅದನ್ನು ಅಲಕ್ಷಿಸಬಹುದು, ಕೋಪವು ಅದನ್ನು ಅಸಂತುಷ್ಟಗೊಳಿಸಬಹುದು, ಮತ್ತು ಸಂಶಯವು ಅದನ್ನು ಕೀಳುಮಾಡಬಹುದು - ಆದರೆ ಅದು ಇನ್ನೂ ಸತ್ಯವಾಗಿದೆ! ಸತ್ಯವು ಸೂರ್ಯನ ಬೆಳಕಿನಂತೆ ಇದೆ. ಮೋಡವು ಅದನ್ನು ಮುಸುಕಬಹುದು, ರಾತ್ರಿಯು ಅದನ್ನು ಕಾಣದಂತೆ ಮಾಡಬಹುದು, ಮತ್ತು ಕುರುಡನು ಅದನ್ನು ನೋಡನು - ಆದರೂ ಅದು ಇನ್ನೂ ಹೊಳೆಯುತ್ತಿದ್ದಾನೆ, ಯಾಕೆಂದರೆ ಸೂರ್ಯನ ಕಿರಣ ಕಿರಣವೇ.

ಯಾರಿಗೂ ಹಿಡಿಸದ ವ್ಯಕ್ತಿಯಾದ ಬಿಳಾಮನು ಒಂದು ಸಾರಿ ಈ ಸತ್ಯವನ್ನು ಮಾತನಾಡಿದನು "ದೇವರು, ಮನುಷ್ಯನಂತೆ ಎರಡು ಮಾತಿನವನಲ್ಲ, ಮಾನವನಂತೆ ಮನಸ್ಸನ್ನು ಬೇರೆ ಮಾಡಿಕೊಳ್ಳುವವನಲ್ಲ, ತಾನು ಹೇಳಿದ ಮೇರೆಗೆ ನಡೆಯುವುದಿಲ್ಲವೋ; ಮಾತುಕೊಟ್ಟ ನಂತರ ನೆರವೇರಿಸುವದಿಲ್ಲವೋ?" (ಅರಣ್ಯಕಾಂಡ 23:19). ದೇವರು ತನ್ನ ವಾಕ್ಯದಲ್ಲಿ ಏನನ್ನಾದರು ಹೇಳಿದರೆ, ಅದನ್ನು ನೀವು ನಂಬಬೇಕು. ಅರಸನ ಸರದಾರನು ದುಡುಕಿದಂತೆ, ಅದನ್ನು ನಂಬುವದು ನಿಮಗೆ *ಒಳ್ಳೇಯದು,* ಯಾಕೆಂದರೆ "ಸತ್ಯವೇ ಸತ್ಯ ಸತ್ಯವೇ ಸತ್ಯ."

## ಮುಕ್ತಾಯ

ಈ ಸರಣಿಯ ಎರಡನೆಯ ಪಾಠದಲ್ಲಿ, ನಾವು ಎಲೀಷನ ಸಂದೇಶವನ್ನು ಎರಡು ಭಾಗದಲ್ಲಿ ವಿವರಿಸಿದ್ದೇವೆ:

- ದೇವರನ್ನು, ಆತನ ದೂತನನ್ನು, ಮತ್ತು ಆತನ ಸಂದೇಶವನ್ನು ಗೌರವಿಸು ಮತ್ತು ನೀನು ಆಶೀರ್ವದಿಸಲ್ಪಡುವಿ.

- ದೇವರನ್ನು ಆತನ ದೂತನನ್ನು, ಮತ್ತು ಆತನ ಸಂದೇಶವನ್ನು ಗೌರವಿಸುವುದರಲ್ಲಿ ನೀನು ವಿಫಲನಾದರೆ ಮತ್ತು ನೀನು ಶಾಪಗ್ರಸ್ತನಾಗವಿ.

ಈ ಪಾಠದ ಎರಡನೆಯ ಭಾಗದ ಸಂದೇಶವು ದೇವರನ್ನು, ಆತನ ದೂತನನ್ನು, ಮತ್ತು ಆತನ ಸಂದೇಶವನ್ನು ಗೌರವಿಸುವುದರಲ್ಲಿ ವಿಫಲರಾಗಿರುವುದರಿಂದ ಆಗುವ ಪರಿಣಾಮಗಳ ಬಗ್ಗೆ ಇಲ್ಲಿ ನಾವು ನಾಟಕೀಯ ಪ್ರಾಯೋಗಿಕವನ್ನು ಹೊಂದಿದ್ದೇವೆ ಸಾಮಾನ್ಯವಾಗಿ ಈ ಸಮಸ್ಯೆಯನ್ನು ಸಮಾರ್ಯದ ಜನರು ಮತ್ತು ವಿಶೇಷವಾಗಿ ಎಲೀಷನ ಮಾತುಗಳನ್ನು ಹಾಸ್ಯಮಾಡಿದ ಅರಸನ ಸರದಾನ ದುರಂತದಲ್ಲಿ ನಾವು ಕಾಣುವವರಾಗಿದ್ದೇವೆ. ಈ ಪಾಠವನ್ನು ಮುಗಿಸುತ್ತಿದ್ದಂತೆಯೇ, ದೇವರ ವಾಕ್ಯದ ಸತ್ಯಕ್ಕಾಗಿ ನಿಮ್ಮನ್ನು ನೀವು ಎಲ್ಲಿ ಇರಿಸಿಕೊಳ್ಳುತ್ತೀರಿ ಎಂದು ನಿಮ್ಮನ್ನು ನೀವು ಪ್ರಶ್ನಿಸಿಕೊಳ್ಳಿರಿ: ನೀವು ಅದನ್ನು ಗೌವಿಸುತೀರಾ, *ನೀವು* ಅದನ್ನು ನಂಬುವವರಾಗಿರುತ್ತೀರಾ, ನೀವು ಅದಕ್ಕೆ ವಿಧೇಯರಾಗುತ್ತೀರಾ ಅಥವಾ ಅದಕ್ಕೆ ಅವಮಾರ್ಯದೆ ಮಾಡುವವರೂ, ಹಿಯಾಳಿಸುವವರೂ, ಅವಿಧೇಯರಾಗುವವರೂ ಆಗಿರುತ್ತೀರಾ? ಒಬ್ಬ ಜ್ಞಾನಿಯಾದ ಮನುಷ್ಯನು ಇತರರ ಅನುಭವದಿಂದ ಕಲಿತುಕೊಳ್ಳುತ್ತಾನೆ. ಆಕ್ರಮಣಕ್ಕೆ ಒಳಗಾದ ಸಮಾರ್ಯ ಪಟ್ಟಣವನ್ನು ನೋಡಿರಿ ಮತ್ತು ಪಶ್ಚಾತ್ತಾಪಪಟ್ಟು ದೇವರೆಡೆಗೆ ಈಗಲೇ ತಿರುಗಿಕೊಳ್ಳುವುದನ್ನು ನಿರ್ಧರಿಸಿರಿ!

---

ಟಿಪ್ಪಣಿಗಳು

[1]W. J. Deane and S. T. Taylor-Taswell, "Proverbs," *The Pulpit Commentary*, vol. 9, *Proverbs, Ecclesiastes, Songs of Solomon*, ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 443. [2]Josephus *Antiquities* 9.4.4. [3]ಈ ಮಾಹಿತಿಯನ್ನು ನನ್ನ NIVಯ ಆವೃತ್ತಿಯ ಅಡಿಟಿಪ್ಪಣಿಯಿಂದ ತೆಗೆದುಕೊಳ್ಳಲಾಗಿದೆ. ಬೆಳ್ಳಿಯ ಪ್ರಸ್ತುತ ಮೌಲ್ಯವನ್ನು ಕಲಿತುಕೊಳ್ಳಲು ನೀವು ಅಮೂಲ್ಯ ಲೋಹದೊಂದಿಗೆ ವ್ಯವಹರಿಸುತ್ತಿರುವವರ ಜೊತೆ ಪರೀಕ್ಷಿಸಬಹುದು. [4]ಈ ಮಾಹಿತಿಯನ್ನು ನನ್ನ NASB ಯ ಆವೃತ್ತಿಯ ಅಡಿನುಡಿಯ ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. [5]Josephus *Wars* 5.13.7. [6]C. F. Keil and F. Delitzsch, "1 and 2 Kings," *Commentary on the Old Testament*, vol. 3, *1 and 2 Kings, 1 and 2 Chronicles, Ezra, Nehemiah, Esther.* (Peabody, Mass.: Hendrickson Publishers, 1989), 328.ಪ್ರಾಣಿಯ ಲದ್ದಿಗೆ ಸೂಚಿಸಲ್ಪಟ್ಟ ಇತರ ಸಾಧ್ಯತೆಗಳು ಆಗಿವೆ. ಪ್ರಾಣಿಗಳ ಈ ಮಲವು ಸಾಮಾನ್ಯವಾಗಿ ಜೀರ್ಣವಾಗದ ಆಹಾರಾಂಶಗಳನ್ನು ಹೊಂದಿರುತ್ತದೆ, ಬಹುಶಃ ಇದರ ಉದ್ದೇಶವು ಇದರ ಮೂಲಕ ಅಗೆದಾಗ ತಿನ್ನಬಹುದಾದ ಸಂಗತಿಗಳು ಸಿಕ್ಕುತ್ತವೆ ಅಥವಾ ಲದ್ದಿಯು ಇಂದನಕ್ಕಾಗಿ ಕೊಳ್ಳಲ್ಪಡುತ್ತಿತ್ತು. [7]ಎರಡೂ ಮಕ್ಕಳೂ ದೇವರಲ್ಲದವುಗಳಿಂದ ಮುಂದೆ ಮಾಡಲ್ಪಟ್ಟ ಕರಾರುಗಳಿಂದ, ಪೌಷ್ಟಿಕಾಂಶದ ಕೊರತೆಯಿಂದ ಮರಣಹೊಂದಿರಲೇಬೇಕು, ಆದರೆ ಇದು ಇನ್ನೂ ಭಯಾನಾಕವಾದ ಕಥೆಯಾಗಿತ್ತು. [8]Josephus *Wars* 6.3.4. [9]ಆಸ್ಟ್ರೇಲಿಯಾದಲ್ಲಿ ಈ ತರದ ವಸ್ತುಗಳು "ಹೆಸ್ಸಿಯನ್" ಎಂದು ಕರೆ ಯಲ್ಪಡುತ್ತವೆ. ನಿಮ್ಮ ಕೇಳುಗರಿಗಾಗಿ ಪರಿಚಿತವಾದ ಇನ್ನೊಂದು ಪದವನ್ನು ಉಪಯೋಗಿಸಿ. [10]G. Rawlinson, "2 Kings," *The Pulpit Commentary*, vol. 5, *1 & 2 Kings*, ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 125.

[11]Matthew Henry, *Commentary on the Whole Bible*, ed. Leslie F. Church (Grand Rapids, Mich.: Zondervan Publishing House, 1961), 408. [12]ಅನೇಕ ಲೇಖಕರು ಯೋಚಿಸುವುದೇನೆಂದರೆ ಅರಸನು ತನ್ನ ಮನವನ್ನು ಬದಲಾಯಿಸಿದನು ಮತ್ತು ನಂತರ ತನ್ನ ವಧಿಸುವ ಆಜ್ಞೆಯನ್ನು ವಜಾಮಾಡುವುದರಲ್ಲಿ ಅವಲಿಸಿದನು, ಆದರೆ ಅರಸನ ಬದಲಾದ ಹೃದಯದ ಯಾವ ಪುರಾವೆಯು ಇಲ್ಲದ್ದನ್ನು ನಾವು ನೋಡುತ್ತೇನೆ. ಯೋರಾಮನ ಹೃದಯವನ್ನು ಬಲ್ಲಂತಹ ಎಲೀಷನು ಅರಸನು ಆತನು ಮನೆಯನ್ನು ತಲುಪಿದ್ದಾಗ್ಯೂ ಕೂಡಾ ಆತನನ್ನು "ಕೊಲೆಗಾರನ ಮಗ" ಎಂದು ಕರೆಯುತ್ತಾನೆ (2 ಅರಸು 6:32). [13]Keil and Delitzsch, 329. [14]ಕೆಲವು ಭಾಷಾಂತರಗಳು

"ಅರಸನು" ಇದರ ಬದಲಾಗಿ "ದೂತನು ಎಂದಿದೆ" (ನೋಡಿರಿ RSV; REB; NLT; TEV). ಇಬ್ರಿಯ ಪದವಾದ "ದೂತನು" ಮತ್ತು "ಅರಸನು" ಸಮಾನ ಪದಗಳಾಗಿವೆ. [15]James Burton Coffman and Thelma B. Coffman, *Commentary on Second Kings*, James Burton Coffman Commentaries, The Historical Books, vol. 6 (Abilene, Tex.: A.C.U. Press, 1992), 87. [16]Ibid., 88. [17]ನೀವು ಇರುವ ಪ್ರದೇಶದಲ್ಲಿನ ಸತ್ಯವೇದದ ಸತ್ಯಗಳನ್ನು ಮೂದಲಿಸುವವರಿಗೆ ಮತ್ತು ಸಂದೇಹಿಸುವವರಿಗೆ ಇದನ್ನು ಅನ್ವಯಿಸಿರಿ. [18]Gertrude Stein (1874-1946), *Sacred Emily* (1913); quoted in John Barlett, *Barlett's Familiar Quotations*, 16th ed., ed. Justin Kaplan (Boston: Little, Brown, and Co., 1992), 627.